UASB Library
Newspaper Clippings
27.07.2023 THURSDAY
Pg .1
Jai Kisan

ನಿರಂತರ ಮಳೆಯಿಂದ ಬೆಳೆಗೆ ಕೊಳೆ ರೋಗ ಭೀತಿ

ಬರಗಾಲ ದೂರಾದ ಖುಷಿಯಲ್ಲಿದ್ದ ರೈತರಿಗೆ ಈಗ ಹಸಿಬರದ ಆತಂಕ । ರಾಜ್ಯದ ಪ್ರಮುಖ ಬೆಳೆಗಳಿಗೆ ಅತಿವೃಷ್ಟಿ ಪರಿಣಾಮ

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಕರಾವಳಿ, ಮಲೆನಾಡು ಮಾತ್ರವಲ್ಲದೇ ಬರದ ಛಾಯೆ ಆವರಿಸಿದ್ದ ಜಿಲ್ಲೆಗಳ್ಲೂ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆ ಈಗ ಅಡ್ಡ ಪರಿಣಾಮ ಬೀರಲಾರಂಭಿಸಿದೆ. ತಡವಾಗಿ ರಾಜ್ಯ ಪ್ರವೇಶಿಸಿದ ಮುಂಗಾರು ಮಳೆ ಈ ವರ್ಷ ಬರದ ಆತಂಕವನ್ನು ದೂರ ಮಾಡಿದೆಯಾದರೂ ನಿರಂತರ ಮಳೆಯ ಪರಿಣಾಮ ಪ್ರಮುಖ ಬೆಳೆಗಳಿಗೆ ಕೊಳೆ ರೋಗದ ಆತಂಕ ಎದುರಾಗಿದೆ. ಮಳೆ ಇನ್ನೆರಡು ದಿನಗಳ ಕಾಲ ಮುಂದುವರಿದರೆ ಹಲವಾರು ಬೆಳೆಗಳು ನೀರಿನಲ್ಲಿ ಕೊಳೆತು ಹೋಗಲಿವೆ ಎಂದು ರೈತರು ಆತಂಕಗೊಂಡಿದ್ದಾರೆ.

ಪ್ರಮುಖವಾಗಿ ಈರುಳ್ಳಿ, ಹೆಸರು, ಮೆಕ್ಕೆಜೋಳದಂತಹ ಬೆಳೆಗಳಿಗೆ ಅತಿಯಾದ ಮಳೆ ಕೊಳೆರೋಗ ತರುತ್ತದೆಯಲ್ಲದೇ ಭತ್ತದ ಗದ್ದೆಗಳಲ್ಲೂ ನೀರು ನುಗ್ಗಿ ಅನೇಕ ಕಡೆಗಳಲ್ಲಿ ಭಾರಿ ನಷ್ಟ ಉಂಟಾಗಿದೆ. ರಾಜ್ಯದ ಚಿತ್ರದುರ್ಗ, ದಾವಣಗೆರೆ, ಕೊಪ್ಪಳ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಹಸಿಬರದ ಆತಂಕ ಸೃಷ್ಟಿಯಾಗಿದೆ.

ಈರುಳ್ಳಿಗೆ ಕೊಳೆ ರೋಗದ ಗಂಡಾಂತರ!

■ ಎಂ.ಎಸ್. ಅಹೋಬಳಪತಿ ಚಿತ್ರದುರ್ಗ
Ahobalapathy.Narayanappa@timesgroup.com

ಎಡಬಿಡದ ಮಳೆಯಿಂದ ಶೀತದ ಪ್ರಮಾಣ ಹೆಚ್ಚಳವಾಗುತ್ತಿರುವುದು ಈರುಳ್ಳಿ ಬೆಳೆಗೆ ಮಾರಕವಾಗಿ ಪರಿಣಮಿಸಿದೆ. ಕಳೆದ ನಾಲ್ಕು ವರ್ಷಗಳಿಂದ ಈರುಳ್ಳಿ ಬೆಳೆಯಿಂದ ನಷ್ಟ ಅನುಭವಿಸುತ್ತಿರುವ ರೈತರು, ಈಗ ಮತ್ತೊಂದು ನಷ್ಟದ ಸುಳಿಗೆ ಸಿಲುಕುವ ಆತಂಕದಲ್ಲಿದ್ದಾರೆ.

ಈ ಬಾರಿ ಮುಂಗಾರು ತಡವಾಗಿ ಆಗಮಿಸಿದ್ದರಿಂದ ಜೂನ್ ಎರಡು, ಮೂರನೇ ವಾರದಲ್ಲಿ ರೈತರು ಈರುಳ್ಳಿ ಬಿತ್ತನೆ ಮಾಡಿದ್ದರು. ಈಗ ಕಳೆ ನಿರ್ವಹಣೆ ಮಾಡಲು ಔಷಧ ಸಿಂಪಡಣೆ ಮಾಡಿ, ಬೆಳೆಗೆ ಹದ ಮಾಡಲು ಸಜ್ಜಾಗುವ ಹೊತ್ತಿಗೆ ನಿರಂತರವಾಗಿ ಸುರಿಯುತ್ತಿರುವ ಮಳೆ ಈರುಳ್ಳಿಗೆ ಗಂಡಾಂತರ ತಂದಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮುಂಗಾರು ಗುರಿ 25,147 ಹೆಕ್ಟೇರ್‌ಗೆ 14,894 ಹೆಕ್ಟೇರ್ ಬಿತ್ತನೆಯಾಗಿತ್ತು. ಚಳ್ಳಕೆರೆ, ಮೊಳಕಾಲ್ಮೂರು ತಾಲೂಕುಗಳಲ್ಲಿ ಮೇ ತಿಂಗಳಲ್ಲೇ ಬಿತ್ತನೆ ಮಾಡಿದ್ದರಿಂದ ಒಂದಷ್ಟು ಪ್ರಮಾಣ ಈಗಾಗಲೇ ಕೆಲವು ಕಡೆ ಗೆಡ್ಡೆ ಕಟ್ಟಿದ್ದು ಇನ್ನು ಕೆಲವು ಕಡೆ ಗೆಡ್ಡೆ ಕಟ್ಟುವ ಹಂತದಲ್ಲಿದೆ. ಸಾಧ್ಯತೆ ಇದೆ. ಆದ್ದರಿಂದ ರೈತರ ಆತಂಕ ಇಮ್ಮಡಿಯಾಗಿದೆ.


ಚಿತ್ರದುರ್ಗ ಜಿಲ್ಲೆಯಲ್ಲಿ ಈರುಳ್ಳಿ ಬೆಳೆ ಹಾನಿ ಪ್ರದೇಶ.

ಈ ಮಳೆ ಮೊದಲೇ ಬಿತ್ತನೆಯಾಗಿರುವ, ನಂತರದ ದಿನಗಳಲ್ಲಿ ಬಿತ್ತನೆಯಾಗಿರುವ ಎರಡೂ ಹಂತದ ಈರುಳ್ಳಿ ಬೆಳೆಗೂ ಮಾರಕವಾಗಿ ಪರಿಣಮಿಸಿದೆ.

ವಿಶೇಷವಾಗಿ ಜೂನ್ ತಿಂಗಳ ಕೊನೆ ಎರಡು ವಾರಗಳಲ್ಲಿ ಬಿತ್ತನೆ ಮಾಡಿದ ಈರುಳ್ಳಿ ಬೇರು ಎಳೆಯದಾಗಿದ್ದು ನಿರಂತರ ಮಳೆಯಿಂದಾಗಿ ಶೀತಕ್ಕೆ ಕೊಳೆಯುವ ಆತಂಕ ಹುಟ್ಟಿಸಿದೆ. ಈಗಾಗಲೇ ಬಂದಿರುವ ಈರುಳ್ಳಿ ಗಡ್ಡೆಗೆ ಕೊಳೆರೋಗ ಹಬ್ಬುವ ಸಾಧ್ಯತೆ ಇದೆ. ಆದ್ದರಿಂದ ರೈತರ ಆತಂಕ ಇಮ್ಮಡಿಯಾಗಿದೆ.

ಬೆಲೆ ಏರಿಕೆ ಎಚ್ಚರಿಕೆ: ರಾಜ್ಯದ ವಿಜಯಪುರ, ಗದಗ, ದಾವಣಗೆರೆ ಮತ್ತು ಬೆಳಗಾವಿ ಜಿಲ್ಲೆಗಳು ಈರುಳ್ಳಿ ಬೆಳೆಯುವ ಪ್ರಮುಖ ಜಿಲ್ಲೆಗಳಾಗಿದ್ದು, ಹವಾಮಾನ ವೈಪರೀತ್ಯದ ಪರಿಣಾಮ ಎಲ್ಲ ಜಿಲ್ಲೆಗಳಲ್ಲೂ ಇರುವುದರಿಂದ ಬಿತ್ತನೆ ಮಾಡಿರುವ ಈರುಳ್ಳಿಯ ಶೇ.25ರಷ್ಟು ಬೆಳೆ ಕೈಗೆ ಸಿಗುವುದು ಕಷ್ಟ ಹಾಗಾಗಿ, ಟೊಮೆಟೋ ಬೆಲೆ ಏರಿಕೆಯ ದಾರಿಯಲ್ಲೇ ಈರುಳ್ಳಿ ಕೂಡಾ ಸಾಗಲಿದ್ದು ಗ್ರಾಹಕರಿಗೆ ಹೊರೆಯಾಗಲಿದೆ ಎಂದು ಹೇಳಲಾಗುತ್ತಿದೆ.

''ಪ್ರಸ್ತುತ ಮಹಾರಾಷ್ಟ್ರ, ಮಧ್ಯ ಪ್ರದೇಶ, ಗುಜರಾತ್, ರಾಜ್ಯದ ವಿಜಯಪುರದಿಂದ ದಾಸ್ತಾನು ಮಾಡಿರುವ ಈರುಳ್ಳಿ ಮಾರುಕಟ್ಟೆಗೆ ರವಾನೆಯಾಗುತ್ತಿದೆ. ಇನ್ನು ಮೂರ್ನಾಲ್ಕು ತಿಂಗಳು ದಾಸ್ತಾನು ಇರುವ ಈರುಳ್ಳಿ ಪೂರೈಕೆಯಾಗಲಿದೆ. ಆದರೆ, ಹವಾಮಾನ ವೈಪರೀತ್ಯ ದಾಸ್ತಾನು ಮಾಡಲಾಗಿರುವ ಈರುಳ್ಳಿಗೂ ಆಪಾಯ ತಂದೊಡ್ಡಲಿದೆ. ಶೇಖಾಂಶ ಹೆಚ್ಚಳದಿಂದ ಈರುಳ್ಳಿ ಮೊಳಕೆ ಬರುವುದು, ಕವ್ವಾಗುವುದು ಸಾಮಾನ್ಯ. ಮಳೆ ಹೀಗೆ ಮುಂದುವರಿದಲ್ಲಿ ದಾಸ್ತಾನು ಇರುವ ಈರುಳ್ಳಿ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಬರಲಿದೆ,'' ಎನ್ನುತ್ತಾರೆ ಸಗಟು ವ್ಯಾಪಾರಿ ಮೊಯೀದ್ದೀನ್ ಬೇಗ್.

ಮೆಕ್ಕೆಜೋಳಕ್ಕೆ ಶೀತಬಾಧೆ!


ದಾವಣಗೆರೆ ಜಿಲ್ಲೆಯ ಮಾಯಕೊಂಡ ಗ್ರಾಮದ ಹೊಲದಲ್ಲಿನ ಮೆಕ್ಕೆಜೋಳ ಬೆಳೆಯಲ್ಲಿ ನೀರು ನಿಂತಿರುವುದು.

■ ಯಳಕಾರು ಮಂಜು ದಾವಣಗೆರೆ
manjunath.lokanath@timesgroup.com

ಕಳೆದ ಹತ್ತು ದಿನಗಳಿಂದ ಮೋಡ ಕವಿದ ವಾತಾವರಣದ ಜತೆ ಜಿಟಿಜಿಟಿ ಮಳೆಯಿಂದ ಜಿಲ್ಲೆಯ ಪ್ರಮುಖ ಬೆಳೆ ಮೆಕ್ಕೆಜೋಳಕ್ಕೆ ಶೀತಬಾಧೆ ಕಾಡುತ್ತಿದೆ. ಇದರಿಂದ ಮೆಕ್ಕೆಜೋಳ ಕಣಜ ದಾವಣಗೆರೆಯಲ್ಲಿ ರೈತರು ತಲ್ಲಣಿಸುತ್ತಿದ್ದಾರೆ.

ಹೌದು, ಮೆಕ್ಕೆಜೋಳ ಸೂಕ್ಷ್ಮ ಬೆಳೆ. ಈ ವಾತಾವರಣ ಬೆಳೆಯನ್ನೇ ಆಪೋಷನ ತೆಗೆದುಕೊಳ್ಳುವಂತಿದ್ದು ರೈತರು ಆತಂಕಕ್ಕೆ ಸಿಲುಕಿದ್ದಾರೆ. ಈ ವಾತಾವರಣದಿಂದ ಶೀತದ ಆಡ್ಡಪರಿಣಾಮಗಳ ಜತೆ ಬೆಳೆ ಬೆಳಾಗುವುದು ಹಾಗೂ ಕ್ಯಾದಿಗೆ ರೋಗದ ಲಕ್ಷಣಗಳು ಕಂಡು ಬರುತ್ತಿವೆ. ಮಳೆ ನೀರು ನಿಂತು ಬೆಳೆದಿದ್ದ ಮೆಕ್ಕೆಜೋಳ ಮುರುಟಿ ಹೋಗುತ್ತಿದ್ದು, ಕೃಷಿ ಇಲಾಖೆ ಕೂಡ ನಿಯಂತ್ರಣಕ್ಕೆ ಸಲಹೆ ನೀಡುತ್ತಿದೆ. ರೈತರು ಬೆಳೆ ಉಳಿಸಿಕೊಳ್ಳಲು ಹರಸಾಹಸ ಪಡುವಂತಾಗಿದೆ.

1.12 ಲಕ್ಷ ಹೆಕ್ಟೇರ್: ರಾಜ್ಯದಲ್ಲಿ ಅತಿ ಹೆಚ್ಚು ಮೆಕ್ಕೆಜೋಳ ಬೆಳೆಯುವ ಜಿಲ್ಲೆಗಳಲ್ಲಿ ದಾವಣಗೆರೆಯೂ ಒಂದು. ಇಲ್ಲಿ ಮುಂಗಾರು ಹಂಗಾಮಿನಲ್ಲಿ 1.26 ಲಕ್ಷ ಹೆಕ್ಟೇರ್ ಮೆಕ್ಕೆಜೋಳ ಬಿತ್ತನೆ ಗುರಿ ಹೊಂದಲಾಗಿದೆ. ಈ ಬಾರಿ ಬೇಸಿಗೆ ಮತ್ತು ಜೂನ್ ತಿಂಗಳಲ್ಲಿ ಮಳೆ ಕೊರತೆಯಿಂದ ಮೆಕ್ಕೆಜೋಳ ಬಿತ್ತನೆಯೇ ಕುಂಠಿತವಾಗಿತ್ತು, ಈ ಬಾರಿ ಬೆಳೆಯನ್ನೆ ರೈತರು ಮರೆಯುವಂತಾಗಿತ್ತು.

ಆದರೆ ಬಿತ್ತನೆ ಅವಧಿಯ ಕೊನೇ ಕ್ಷಣದಲ್ಲಿ ಜುಲೈ ತಿಂಗಳಲ್ಲಿ ಮಳೆ ಕೈ ಹಿಡಿದಿದ್ದರಿಂದ ಜಿಲ್ಲೆಯಲ್ಲಿ ಒಟ್ಟು 1,12,151 ಹೆ. ಪ್ರದೇಶದಲ್ಲಿ ಬಿತ್ತನೆ ಆಯಿತು. ಮೆಕ್ಕೆಜೋಳಕ್ಕೆ ಉತ್ತಮ ಧಾರಣೆ ಇರುವುದರಿಂದ ಒಂದಷ್ಟು ಕಾಸು ನೋಡಬಹುದು ಎಂದು ರೈತರು ನಿಟ್ಟುರು ಬಿಟ್ಟಿದ್ದರು. ಮಳೆಗೆ ಬೆಳೆಯೂ ಉತ್ತಮವಾಗಿ ಬೆಳೆಯಿತು. ಈಗ ಮೊಗಕಾಲುದ್ದ ಬೆಳೆದು ನಿಂತಿದೆ.

ಕೃಷಿ ಇಲಾಖೆ ಸಲಹೆ: ಶೀತದಿಂದ ಬೆಳೆ ಬಳಚಾಗುವುದು, ಕ್ಯಾದಿಗೆ ರೋಗ ಲಕ್ಷಣಗಳು ಕಾಣಿಸಿಕೊಳ್ಳಲಿವೆ. ಹಾಗಾಗಿ ನೀರು ಬಸಿದು ಹೋಗುವಂತೆ ದಾರಿ ಮಾಡಿ, ಮೇಲುಗೊಬ್ಬರದ ಜತೆ ಒಂದಷ್ಟು ಪೋಷಕಾಂಶ ನೀಡುವಂತೆ ಸಲಹೆ ನೀಡಿದ್ದಾರೆ. ಆದರೂ ರೈತರು ಕಷ್ಟದಲ್ಲು ಬೆಳೆದ ಬೆಳೆ ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಆಗಬಹುದು ಎಂಬ ಆತಂಕ ಕಾಡುತ್ತಿದೆ. ಜೋರು ಮಳೆ ಬಂದಿದ್ದರೆ ನೀರು ಹರಿದು ಹೋಗುತ್ತಿತ್ತು, ಆದರೆ ದಿನವಿಡೀ ಆಗಾಗ ಸುರಿಯುವ ಮಳೆಯಿಂದ ಸಮಸ್ಯೆ ಹೆಚ್ಚುತ್ತಿದೆ. ಈ ವಾತಾವರಣ ಮುಗಿದು ಬಿಸಿಲು ಯಾವಾಗ ಬರುವುದೋ ಎಂದು ರೈತರು ಕಾಯುತ್ತಿದ್ದಾರೆ.

ಮೋಡ ಕವಿದ ವಾತಾವರಣ ಜತೆ ಜಿಟಿಜಿಟಿ ಮಳೆಯಿಂದ ಮೆಕ್ಕೆಜೋಳ ಬೆಳೆಗೆ ಶೀತದ ಆಡ್ಡಪರಿಣಾಮಗಳಾಗುವ ಭೀತಿ. ರೈತರು ನೀರು ನಿಲ್ಲದೆ ಬಸಿಯಲು ದಾರಿ ಮಾಡಬೇಕು, ಮೇಲು ಗೊಬ್ಬರ, ಪೋಷಕಾಂಶಗಳ ನೀಡಬೇಕು.
-ಶ್ರೀನಿವಾಸ್ ಚಂತಾಲ್ ಕೃಷಿ ಇಲಾಖೆ ಜಂಟಿ ನಿರ್ದೇಶಕ

ಹೆಸರಿಗೆ ಹಳದಿ ರೋಗ


ರಾಯಚೂರು ಜಿಲ್ಲೆಯ ಹೆಸರು ಬೆಳೆಗೆ ಹಳದಿ ರೋಗ ಬಂದಿರುವುದು.

■ ರಾಚಯ್ಯ ಸ್ವಾಮಿ ಮಾಚನೂರು ರಾಯಚೂರು
rachuswamy1995@gmail.com

ನಿರಂತರ ಮಳೆಯಿಂದ ಹೆಸರು ಬೆಳೆಗೆ ಹಳದಿ ರೋಗ ಕಾಡುತ್ತಿದ್ದು ರೈತರು ಆತಂಕ ಅನುಭವಿಸುತ್ತಿದ್ದಾರೆ.

ಬಿಸಿಲು ನಾಡು ರಾಯಚೂರು ಜಿಲ್ಲೆಯಲ್ಲಿ ಕಳೆದ 8 ದಿನಗಳಿಂದ ಬಿಸಿಲಿನ ದರ್ಶನವಿಲ್ಲ. ಮೋಡ ಕವಿದ ವಾತಾವರಣದ ಜತೆ ಜಿಟಿಜಿಟಿ ಮಳೆ ಮುಂದುವರಿದಿದೆ. ಹೆಸರು ಬೆಳೆಯ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿವೆ. ಕೆಲವೆಡೆ ಇಡೀ ಬೆಳೆಯೇ ಕೊಳೆಯುವ ಸ್ಥಿತಿ ತಲುಪಿದೆ. ಬಿಸಿಲಿನ ಕೊರತೆ ಹಿನ್ನೆಲೆ ದ್ಯುತಿಸಂಶ್ಲೇಷಣೆ ಪ್ರಕ್ರಿಯೆಯಲ್ಲಿನ ವ್ಯತ್ಯಯದಿಂದ ಎಲೆ ಹಾಗೂ ಹೂಗಳೂ ಬಣ್ಣಗೆಟ್ಟು ಮುರುಟುವ ಸಾಧ್ಯತೆಯಿದೆ. ಎಕರೆಗೆ 25 ಸಾವಿರ ರೂ. ಖರ್ಚು ಮಾಡಿ ಬೆಳೆದ ಹೆಸರು ಬೆಳೆ ಕೈಗೇರುವುದೋ? ಇಲ್ಲವೋ? ಎಂಬ ಆತಂಕ ರೈತರನ್ನು ಕಾಡುತ್ತಿದೆ. ಬೆಳೆ ಹಾನಿ ಪರಿಶೀಲಿಸಿ ಪರಿಹಾರ ನೀಡುವಂತೆ ಸರಕಾರಕ್ಕೆ ರೈತರು ಒತ್ತಾಯಿಸುತ್ತಿದ್ದಾರೆ.

ಬೆಳೆಯ ವಿಸ್ತೀರ್ಣ: ಜಿಲ್ಲೆಯಲ್ಲಿ ಈ ಬಾರಿ 200 ಹೆಕ್ಟೇರ್ ಪ್ರದೇಶದಲ್ಲಿ ಹೆಸರು ಬೆಳೆ ಬೆಳೆಯಲಾಗಿದೆ. ರಾಯಚೂರು ತಾಲೂಕಿನಲ್ಲಿ 20 ಹೆಕ್ಟೇರ್, ಮಾನ್ವಿ 20 ಹೆಕ್ಟೇರ್, ಸಿರವಾರ 11 ಹೆಕ್ಟೇರ್, ದೇವದುರ್ಗ 10 ಹೆಕ್ಟೇರ್, ಲಿಂಗಸುಗೂರು 20 ಹೆಕ್ಟೇರ್, ಮಸ್ಕಿ 45 ಹೆಕ್ಟೇರ್ ಹಾಗೂ ಸಿಂಧನೂರು ತಾಲೂಕಿನಲ್ಲಿ 100 ಹೆಕ್ಟೇರ್ ಪ್ರದೇಶದಲ್ಲಿ ಹೆಸರು ಬೆಳೆಯಲಾಗಿದೆ.

ಸಿಗುತ್ತಿಲ್ಲ ತಾಜಾ ಮೀನು, ದರವೂ ದುಬಾರಿ

ಕಡಲಬ್ಬರದಿಂದ ನಾಡದೋಣಿ ಮೀನುಗಾರರಿಗೆ ಸಮಸ್ಯೆ

(ಕ.ವಾ.ಗೆ)

■ ಲೋಕೇಶ್ ರೈ ಮಂಗಳೂರು
lokesh.rai@timesgroup.com

ಮಳೆಗಾಲದಲ್ಲಿ ಮೀನಿನ ದರ ಕೊಂಚ ಏರಿಕೆಯಾಗುವುದು ಸಹಜ. ಆದರೆ ಸದ್ಯ ನಾಡದೋಣಿ ಮೀನುಗಾರಿಕೆಯಲ್ಲಿಯೂ ಸಾಕಷ್ಟು ಮೀನು ಲಭ್ಯವಾಗದಿರುವುದರಿಂದ ಮೀನಿನ ದರದಲ್ಲಿ ಭಾರಿ ಏರಿಕೆಯಾಗಿದೆ. ಮುಂಗಾರು ಮಳೆಯಾಗುವ ಜೂನ್ ತಿಂಗಳನಲ್ಲಿ ನಾಡದೋಣಿ ಮೀನುಗಾರಿಕೆ ಆರಂಭವಾದರೆ ಜುಲೈಯವರೆಗೂ ಮುಂದುವರಿಯುತ್ತದೆ. ಮುಂಗಾರು ಚುರುಕುಗೊಂಡಾಗ ಸಮುದ್ರದಲ್ಲಿ ಬಿರುಗಾಳಿ ಸೃಷ್ಟಿಯಾಗಿ ಮೀನುಗಳು ಆಹಾರಕ್ಕಾಗಿ ಸಮುದ್ರ ತೀರದತ್ತ ಬರುತ್ತದೆ. ಆದರೆ ಈ ಬಾರಿ ಮುಂಗಾರು ಮಳೆ ತಡವಾದ ಕಾರಣ ಸಮುದ್ರದಲ್ಲಿ ಬಿರುಗಾಳಿ ಏಳದೇ ನಾಡದೋಣಿಗಳಿಗೆ ಸರಿಯಾದ ಪ್ರಮಾಣದಲ್ಲಿ ಮೀನು ಲಭ್ಯವಾಗಿಲ್ಲ. ಸದ್ಯ ಕಡಲಬ್ಬರ ಜೋರಾಗಿರುವುದರಿಂದ ಸಾಂಪ್ರದಾಯಿಕ ಮೀನುಗಾರಿಕೆಗೆ ಹೋದವರು ವಾಪಸ್ ಬಂದಿದ್ದಾರೆ. ಇದ್ದರಿಂದಾಗಿ ಮಾರುಕಟ್ಟೆಯಲ್ಲಿ ಮೀನಿನ ದರ ದುಬಾರಿಯಾಗಿದೆ.

ರಾಜ್ಯದ ಕರಾವಳಿಯಲ್ಲಿ ಮಳೆಯ ಆಬ್ಬರ ಜೋರಾಗಿರುವುದರಿಂದ ಮಂಗಳೂರು, ಉಡುಪಿ, ಕುಂದಾಪುರ, ಗಂಗೊಳ್ಳಿ, ಮಂಜೇಶ್ವರದಲ್ಲಿಯೂ ನಾಡದೋಣಿ ಕಡಲಿಗೆ ಇಳಿಯುತ್ತಿಲ್ಲ. ಸದ್ಯ ಚೆನ್ನೈಯಿಂದ ಕರಾವಳಿ ಕರ್ನಾಟಕಕ್ಕೆ ಮೀನು ಸರಬರಾಜು ಆಗುತ್ತಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ದುಬಾರಿ ಹಣ ನೀಡಿ ಮೀನು ಖರೀದಿಸಿದರೂ ಫ್ರೆಶ್ ಮೀನು ಸಿಗುತ್ತಿಲ್ಲ. ಸ್ವಲ್ಪ ಪ್ರಮಾಣದಲ್ಲಿ ತಾಜಾ ಮೀನು ಮಾತ್ರ ಲಭ್ಯವಾಗುತ್ತಿದ್ದು ಐಸ್ ಮೀನುಗಳನ್ನೇ ಖರೀದಿಸುವ ಅನಿವಾರ್ಯತೆಯಾಗಿದೆ. ಜತೆಗೆ ಹೋಟೆಲ್‌ಗಳಲ್ಲೂ ಹೊರನಿನೀದ ಬಂದ ಐಸ್ ಮೀನುಗಳೇ ಲಭ್ಯವಾಗುತ್ತಿದ್ದು ದರವೂ ಕೂಡ ಹೆಚ್ಚಾಗಿದೆ.



ಮೀನು	ಹಳೆಯ ದರ	ಬುಧವಾರದ ದರ
ಬೂತಾಯಿ	100ರೂ.	250ರೂ.
ಬಂಗುಡೆ	120 ರೂ.	400ರೂ.
ಸಿಗಡಿ	150ರೂ.	350-550 ರೂ.
ದೊಡ್ಡ ಕಾಣೆ	700 ರೂ.	900ರೂ.
ಸಣ್ಣ ಮುರು	100 ರೂ.	200ರೂ.
ಡಿಸ್ಕೊ	150ರೂ.	300ರೂ.

ಸಮುದ್ರದ ಆಬ್ಬರ ಕಡಿಮೆಯಾಗುತ್ತಿದ್ದಂತೆ ನಾಡದೋಣಿ ಮೀನುಗಾರಿಕೆ ಚುರುಕಾಗಲಿದ್ದು, ತಾಜಾ ಮೀನುಗಳು ಕಡಿಮೆ ದರದಲ್ಲಿ ಲಭ್ಯವಾಗಲಿದೆ. 2 ತಿಂಗಳ ಅವಧಿಯ ಈ ಸಂದರ್ಭ ನಾಡದೋಣಿ ಮೀನುಗಾರರು 10 ದಿನ ಮಾತ್ರವೇ ಮೀನುಗಾರಿಕೆ ಮಾಡುವಂತಾಗಿದೆ. ಇನ್ನು ಕೆಲ ದಿನಗಳಲ್ಲಿಯೇ ಅಳ ಸಮುದ್ರ ಮೀನುಗಾರಿಕೆ ಆರಂಭವಾಗುವ ಕಾರಣ ನಾಡದೋಣಿ ಮೀನುಗಾರಿಕೆಗೆ ಹೆಚ್ಚು ಅವಕಾಶ ಇಲ್ಲ. ಬುಧವಾರವೂ ಮೀನುಗಾರಿಕೆಗೆ ತೆರಳಿದ್ದ ಬೆರಳೆಣಿಕೆಯ ನಾಡದೋಣಿಗಳು ಕಡಲಬ್ಬರದಿಂದ ವಾಪಸ್ ಆಗಿದ್ದು 2 ದಿನಗಳಲ್ಲಿ ಮೀನುಗಾರಿಕೆ ಆರಂಭವಾಗುವ ಸಾಧ್ಯತೆ ಇದೆ.

VijayaKarnataka Pg.02

Vishwavani Pg.09

ತಡವಾಗಿ ಮುಂಗಾರಾಗಿದ್ದರೂ, ಪರಿಸ್ಥಿತಿ ಕೈ ಮೀರಿಲ್ಲ । ಎಲ್ಲ ಜಲಾಶಯಗಳಿಗೂ ಉತ್ತಮ ಒಳಹರಿವು ಶುರುವಾಗಿದೆ । ಕಾರ್ಗಿಲ್ ದಿವಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಹುತಾತ್ಮರಿಗೆ ನಮನ

ರಾಜ್ಯದಲ್ಲಿ ಶೇ.100ರಷ್ಟು ಬಿತ್ತನೆಯಾಗಲಿದೆ: ಮುಖ್ಯಮಂತ್ರಿ ಸಿದ್ದರಾಮಯ್ಯ

■ ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿ ಮುಂಗಾರು ವಿಳಂಬವಾಗಿದ್ದರೂ, ಪರಿಸ್ಥಿತಿ ಕೈಮೀರಿಲ್ಲ, ಪ್ರಸ್ತುತ ಉತ್ತಮ ಮಳೆಯಾಗುತ್ತಿರುವುದರಿಂದ ಮುಂದಿನ ದಿನದಲ್ಲಿ ಶೇ..100ರಷ್ಟು ಬಿತ್ತನೆ ಕಾರ್ಯ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸವ್ಯಕ್ತಪಡಿಸಿದ್ದಾರೆ.

ಕಾರ್ಗಿಲ್ ವಿಜಯ ದಿನದ ಅಂಗವಾಗಿ ಹುತಾತ್ಮ ಯೋಧರ ಪ್ರತಿಮೆಗೆ ನಮನ ಸಲ್ಲಿಸಿದ ಬಳಿಕ ಮಾತನಾಡಿ, ಕರ್ನಾಟಕದಲ್ಲಿ ಈಗ ಮುಂಗಾರು ಚುರುಕಾಗಿದೆ. ಉತ್ತಮ ಮಳೆಯಾಗುತ್ತಿದ್ದು, ಬಿತ್ತನೆ ಚುರುಕಾಗಿ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಶೇ.100 ರಷ್ಟು ಬಿತ್ತನೆಯಾಗಲಿದೆ ಎಂದರು.

ತಡವಾಗಿ ಮುಂಗಾರು ಆರಂಭವಾಗಿದೆಯಾದರೂ, ಪರಿಸ್ಥಿತಿ ಕೈ ಮೀರಿ ಹೋಗಿಲ್ಲ, ಹಾವೇರಿ ಜಿಲ್ಲೆಗೆ ತಾವು ಭೇಟಿ ನೀಡಿದ್ದು, ಅಲ್ಲಿ ಬಿತ್ತನೆ ಕಾರ್ಯ ಚುರುಕಾಗಿ ನಡೆಯುತ್ತಿರುವುದು ಕಂಡುಬಂದಿದೆ. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಪೂರ್ಣ ಪ್ರಮಾಣದ ಬಿತ್ತನೆಯಾಗಲಿದೆ ಎಂದು ವಿಶ್ವಾಸವ್ಯಕ್ತಪಡಿಸಿದರು.

ಬಿಲ್ಲೆ 31ಕ್ಕೆ ಬೆಲ್ಲಾ ಪ್ರವಾಸ: ಮುಂದಿನ ಸೋಮವಾರ ಮಂಗಳೂರು, ಉಡುಪಿ, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಭೇಟಿ ನೀಡಲಿದ್ದು, ಮಳೆಯಿಂದ ಹಾನಿಗೊಳಗಾಗಿರುವ ಪ್ರದೇಶಗಳ ಜನರನ್ನು ಭೇಟಿಯಾಗಿ ಅವರ ಕಷ್ಟಗಳನ್ನು ಆಲಿಸಲಾಗುವುದು. ಜುಲೈ 31ರಿಂದ ಸಂಪುಟದ ಸಚಿವರ ತಂಡಗಳು ವಿವಿಧ ಜಿಲ್ಲೆಗಳಿಗೆ ಪ್ರವಾಸ ತೆರಳಿ, ಪರಿಸ್ಥಿತಿ ಅವಲೋಕಿಸಲಿವೆ ಎಂದು ತಿಳಿಸಿದರು.

ಈ ಮೊದಲು ಬ್ಯಾಂಕರ್ ನೀರಿನ ಸರಬರಾಜು ಮಾಡಲಾಗುತ್ತಿತ್ತು. ಆದರೆ ಈಗ ಎಲ್ಲೆಡೆ ಮಳೆಯಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿದೆ ಎಂದರು.


ಕಾರ್ಗಿಲ್ ವಿಜಯ ದಿನದ ಅಂಗವಾಗಿ ಹುತಾತ್ಮ ಯೋಧರ ಸ್ಮಾರಕಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗೌರವ ಸಲ್ಲಿಸಿದರು.

ಶಾಸಕರ ಹೆಸರಿನಲ್ಲಿ ನಕಲಿ ಪತ್ರ

ಭಾರಿ ವಿವಾದಕ್ಕೆ ಕಾರಣವಾಗಿದ್ದ ಶಾಸಕರ ಪತ್ರ ಚಳವಳಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಆದರು, ಶಾಸಕರು ಸಚಿವರ ಮೇಲೆ ದೂರು ನೀಡಿ ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ ಎನ್ನಲಾದ ಪತ್ರವನ್ನು ಶಾಸಕ ಬಿ.ಆರ್.ಪಾಟೀಲ್ ಅವರೇ ನಕಲಿ ಪತ್ರ ಎಂದು ಹೇಳಿದ್ದಾರೆ. ಆದರೂ ಪತ್ರಿಕೆಗಳಲ್ಲಿ ಪ್ರಕಾರ ಮಾಡಲಾಗಿದೆ. ಶಾಸ

Hosadigantha Pg.08

ಟೊಮೆಟೊ ಗಿಡಗಳಿಗೆ ಭಾರೀ ಡಿಮಾಂಡ್!

ಮಾರುಕಟ್ಟೆಯಲ್ಲಿ ಟೊಮೆಟೊಗೆ ಚಿನ್ನದ ಬೆಲೆ | ರೈತರೇ ಹೆಚ್ಚು ನರ್ಸರಿಗಳತ್ತ ಮುಖ

• ವಿ.ನರಸಿಂಹಮೂರ್ತಿ

ದೇವನಹಳ್ಳಿ: ರೈತರಿಗೆ ಆದಾಯ ತಂದು ಕೊಡುತ್ತಿರುವ ಟೊಮೆಟೊ ಬೆಳೆ ಬೆಳೆಯುವತ್ತ ಜಿಲ್ಲೆಯ ತೋಟಗಾರಿಕಾ ರೈತರ ಚಿತ್ತನೆಟ್ಟಿದೆ. ಇದರ ನಡುವೆ ಟೊಮೆಟೊ ಸಸಿಗೆ ಭಾರಿ ಬೇಡಿಕೆ ಬಂದಿದೆ.

ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ಬಿತ್ತನೆಯಾಗಿದ್ದ 326 ಹೆಕ್ಟೇರ್ ಟೊಮೆಟೊ ಎಲೆ ಬೆಳೆಗೆ ಮುದುಡುವ ರೋಗದಿಂದ ಗಿಡ ಮುದುಡಿ, ಇಳುವರಿ ಕಡಿಮೆಯಾದ ಹಿನ್ನೆಲೆಯಲ್ಲಿ ಜುಲೈ ತಿಂಗಳಲ್ಲಿ ಟೊಮೆಟೊ ಬೆಲೆ ಕೆಜಿಗೆ ಶತಕ ದಾಟಿತು. ಈಗ ಬೆಲೆ ಏರಿಕೆಯನ್ನು ಮನಗಂಡಿರುವ ರೈತರು, ಟೊಮೆಟೊ ನಾಟಿ ಮಾಡಿ ಆದಾಯಗಳಿಸುವ ಲೆಕ್ಕಾಚಾರದಿಂದ, ಈ ಬೆಳೆಯಿಡಲು ಮುಂದಾಗುತ್ತಿದ್ದಾರೆ.

ಕಚನ್‌ರಾಣಿ, ಕೆಂಪುಸುಂದರಿ ಹಾಗೂ ತರಕಾರಿಗಳ ರಾಜ ಎಂದು ಕರೆಸಿಕೊಳ್ಳುವ ಟೊಮೆಟೊಗೆ ಚಿನ್ನದ ಬೆಲೆ ಬಂದಿರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಟೊಮೆಟೊ ನಾಟಿ ಪ್ರಮಾಣ ಹೆಚ್ಚಾಗಿದ್ದು ಹೊಸತಳಿ ಟೊಮೇಟೊ ಸಸಿಗಳಿಗೆ ಬೇಡಿಕೆ ಹೆಚ್ಚಾಗಿದೆ.

ಬಯಲು ಸೀಮೆ ಜಿಲ್ಲೆಗಳಲ್ಲಿ ಒಂದಾದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರೈತರು ಟೊಮೇಟೊ ಬೆಳೆಯಲು ಮುಂದಾಗಿದ್ದಾರೆ, ಹೊಸತಳಿ ಟೊಮೆಟೊ ಸಸಿಗಳಿಗಾಗಿ ನರ್ಸರಿಗಳಿಗೆ ರೈತರು ಮುಗಿಬೀಳುತ್ತಿದ್ದಾರೆ. ಬೇಡಿಕೆ ಹೆಚ್ಚಾದಂತೆ ಆದರ ಬೆಲೆಯೂ ಹೆಚ್ಚಾಗಿದ್ದು ನರ್ಸರಿಗಳಲ್ಲಿ ಸಸಿಗಳು ಖಾಲಿ ಆಗಿವೆ. ಸಾಮಾನ್ಯವಾಗಿ ಒಂದು ಸಸಿ ಒಂದಕ್ಕೆ 40-50 ಪೈಸೆಗೆ ಸಿಗುತ್ತಿತ್ತು. ಟೊಮೆಟೊ ಸಸಿಯಲ್ಲಿ ವಿವಿಧ ತಳಿಗಳನ್ನು ನೋಡಬಹುದು ಈಗ 3-4ರೂ. ಕೊಟ್ಟರೂ ಸಸಿಗಳು ಸಿಗುತ್ತಿಲ್ಲ ಅಷ್ಟರಮಟ್ಟಿಗೆ ಬೇಡಿಕೆ ಹೆಚ್ಚಾಗಿದೆ. ಕಳೆದ ವರ್ಷ ಟೊಮೆಟೊ ಬೆಳೆ ಹೆಚ್ಚಳ ಆದಾಗ ಹೆಚ್ಚಿನ ರೈತರು ಸಸಿಗಳನ್ನು ಖರೀದಿಸಿದ್ದರು, ಬೆಲೆ ಕುಸಿತದಿಂದ ರೈತರ ಕಂಗಾಲಾಗಿದ್ದರು. ಈ ಬಾರಿಯೂ ಅದೇ ಪರಿಸ್ಥಿತಿ ಬರಬಹುದು ಎಂಬುವ ಭಯ ಇದ್ದರೂ ಸಹ ರೈತರು ಸಸಿಗಳನ್ನು ಮಾಡುತ್ತಿದ್ದಾರೆ.



> ಟೊಮೆಟೊ ಸಸಿಗಳು ಹೊಸಕೋಟೆ ತಾಲೂಕಿನ ಸೂಲಿಬೆಲೆ, ದೊಡ್ಡಬಳ್ಳಾಪುರ ತಾಲೂಕು, ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರ ರಸ್ತೆಯಲ್ಲಿರುವ ಡಿ. ಹೊಸೂರು ಇತರೆ ನರ್ಸರಿಗಳಲ್ಲಿ ಟೊಮೆಟೊ ಸಸಿಗಳನ್ನು ರೈತರು ಖರೀದಿಸುತ್ತಿದ್ದಾರೆ. ಟೊಮೆಟೊ ಗೆ ಹೆಚ್ಚಿನ ಬೆಲೆ ಬಂದಿರುವುದರಿಂದ ನರ್ಸರಿ ಗಳಿಂದ ಸಸಿಗಳನ್ನು ತಂದು ನಾಟಿ ಮಾಡಲಾಗುತ್ತಿದೆ. ಇರುವ ಅಲ್ಪಸ್ವಲ್ಪದ ಜಮೀನಿನಲ್ಲಿ ಟೊಮೆಟೊ ಇತರ ಬೆಳೆಗಳನ್ನು ಬೆಳೆಯಲಾಗುತ್ತಿದೆ.
> ■ ವಿಜಯ ಕುಮಾರ್ ರೈತ

> ಟೊಮೆಟೊ ಹೆಚ್ಚಿನ ಬೆಲೆ ಬಂದಿ ರುವುದರಿಂದ ಟೊಮೆಟೊ ಸಸಿಗಳಿಗೆ ಹೆಚ್ಚಿನ ಬೇಡಿಕೆ ಹೆಚ್ಚಾಗಿದೆ. ನಮ್ಮ ನರ್ಸರಿಯಲ್ಲಿ 3 ಲಕ್ಷದಿಂದ ಸಾಲು ಲಕ್ಷ ವರೆಗೆ ಸಸಿಗಳನ್ನು ಸಂಗ್ರಹಿಸಿದ್ದೇವೆ. ಒಂದುವರೆ ಲಕ್ಷ ವರೆಗೆ ಟೊಮೆಟೊ ಸಸಿಗಳಿಗೆ ಬೇಡಿಕೆ ಇದೆ.
> ■ ದೇವರಾಜ್. ಡಿ. ಹೊಸೂರು ನರ್ಸರಿ ಮಾಲೀಕ

ದಿನೇ ದಿನೆ ಹೆಚ್ಚಿದ ಬೇಡಿಕೆ

ಸಾಂಪ್ರದಾಯಿಕ ಟೊಮೆಟೊ ಬೆಳೆಯುವ ರೈತರ ಜತೆಗೆ ತರಕಾರಿ ಬೆಳೆಯುವ ರೈತರೂ ಟೊಮೆಟೊ ಸಸಿ ನಾಟಿ ಮಾಡಲು ಮುಂದಾಗುತ್ತಿರುವುದು ಜಿಲ್ಲೆ ಕಂಡುಬರುತ್ತಿದೆ. ಈಗ ನರ್ಸರಿಗಳಲ್ಲಿ ಟೊಮೆಟೊ ಮಡಿ ಸಸಿಗಳಿಗೆ ಭಾರಿ ಬೇಡಿಕೆ ಬಂದಿದೆ. ನೀರಾವರಿ ಇರುವ ರೈತರೇ ಹೆಚ್ಚು ನರ್ಸರಿಗಳತ್ತ ಮುಖ ಮಾಡುತ್ತಿದ್ದಾರೆ. ಮೇ, ಜೂನ್ ತಿಂಗಳಲ್ಲಿ ನಾಟಿ ಮಾಡಲಾಗಿದ್ದ ಮಡಿ ಸಸಿಗಳನ್ನು ಕೇಳುತ್ತಿದ್ದಾರೆ. ಇತ್ತ ನರ್ಸರಿಗಳಲ್ಲೂ ದಿನೇ ದಿನೆ ಟೊಮೆಟೊ ಸಸಿಗಳು ಖಾಲಿಯಾಗುತ್ತಿರುವುದರಿಂದ ಹೊಸ ಮಡಿ ಮಾಡಲು ಮುಂದಾಗುತ್ತಿದ್ದಾರೆ.



ಸಾಮಾನ್ಯವಾಗಿ ಆಷಾಢಮಾಸದಲ್ಲಿ ತರಕಾರಿಗೆ ಅಷ್ಟೇನೂ ಬೆಲೆ ಇರುವುದಿಲ್ಲ ಆದರೆ ಈ ಬಾರಿ ಎಲ್ಲಾ ತರಕಾರಿಗಳ ಬೆಲೆ ಗ್ರಾಹಕರ ಸುಟ್ಟಿದೆ ಆದರಲ್ಲೂ ಟೊಮೇಟೊ ಬೆಲೆ ನೂರಾ ಇಪ್ಪತ್ತರ ಗಡಿ ದಾಟಿ ಮುನ್ನುಗ್ಗುತ್ತಿದೆ. ಮೊದಲೆಲ್ಲ ರೈತರು ಬೀಜಗಳನ್ನು ತಂದು ಒಂದು ಕಡೆ ಬಟ್ಟು ಬಿಟ್ಟು ನಂತರ ಅಲ್ಲಿಂದ ಗಿಡ ನಾಟಿ ಮಾಡುತ್ತಿದ್ದರು. ಹಣ್ಣು ಬರಲು ಎಲ್ಲಾ ಪ್ರಕ್ರಿಯೆ ನಡೆದು -ಪಸಲು ಬರಲು ಮೂರರಿಂದ ನಾಲ್ಕು ತಿಂಗಳು ಬೇಕಾಗಿತ್ತು, ಆದರೆ ಈಗ ಬಂದಿರುವ ಹೊಸ ತಳಿ ನರ್ಸರಿಯಲ್ಲಿ ಸಸಿಗಳನ್ನು ಬೆಳೆಸಿ ಮಾರಾಟ ಮಾಡುತ್ತಿದ್ದು ನೇರವಾಗಿ ಖರೀದಿಸಿ ತಂದು ನಾಟಿ ಮಾಡಿದ ಒಂದುವರೆಯಿಂದ ಎರಡು ತಿಂಗಳಲ್ಲೇ -ಫಸಲು ಬರುತ್ತದೆ, ಈ ಬಾರಿ ನೆರೆ ರಾಜ್ಯಗಳಲ್ಲಿ ಮಳೆ ಹೆಚ್ಚಾಗಿದ್ದು ಬೆಳೆ ನಾಶವಾಗಿದೆ, ಇನ್ನೂ ಕೆಲವು ದಿನ ಟೊಮೆಟೊಗೆ ಬೆಲೆ ಇದ್ದೇ ಇರುತ್ತದೆ ಈ ಈಗಿರುವಷ್ಟು ಬೆಲೆ ಇಲ್ಲವಾಗಿದ್ದರು 50 ರೂ ಸಿಗುತ್ತದೆ. ಜೊತೆಗೆ ಶ್ರಾವಣ ಮಾಸ ಪ್ರಾರಂಭವಾಗಲಿದೆ ಶುಭ ಸಮಾರಂಭಗಳು ಹೆಚ್ಚಾಗಿ ನಡೆಯಲಿದ್ದು ಬೇಡಿಕೆ ಹೆಚ್ಚಾಗಲಿದೆ ಬೇಡಿಕೆಗೆ ತಕ್ಕ ಬೆಲೆ ಸಿಗಲಿದೆ ಎಂದು ರೈತರು ಲೆಕ್ಕಾಚಾರ ಹಾಕಿ ನಾಟಿಗೆ ಮುಂದಾಗಿದ್ದಾರೆ.

ದಿಗಂತ ವಿಶೇಷ

ಮುಂಗಾರು ಬೆಳೆ ವರುಣಾರ್ಪಣ!

ಸಂಕಷ್ಟದ ಸುಳಿಯಲ್ಲಿ ಅನ್ನದಾತರು | ಪರಿಹಾರದ ನಿರೀಕ್ಷೆಯಲ್ಲಿ ರೈತರು

• ಮಹಾಂತೇಶ ಕಣವಿ

ಧಾರವಾಡ: ಕಳೆದ 2 ವರ್ಷಗಳ ಅತಿವೃಷ್ಟಿ ಕಹಿನೆನಪು, ಮಾಸುವ ಮುನ್ನವೇ ಪ್ರಸಕ್ತ ನಿರಂತರ ಮಳೆ (ಅತಿವೃಷ್ಟಿ) ರೈತಕುಲ ಕಾಡಿ ಕಂಗೇಡಿಸಿದೆ. ಮುಂಗಾರು ಹಂಗಾಮಿನ ಬೆಳೆಗಳು ಸಂಪೂರ್ಣ ವರುಣಾರ್ಪಣ ಗೊಂಡು, ಸಂಕಷ್ಟದ ಸುಳಿಯಲ್ಲಿ ಅನ್ನದಾತರು.!

ಪ್ರಸಕ್ತ ಉತ್ತರ ಕರ್ನಾಟಕದ ರೈತ ಸಮೂಹ ಉತ್ತಮ ಇಳುವರಿ ನಿರೀಕ್ಷೆ ಹೊಂದಿತ್ತು. ಮೇ ತಿಂಗಳಲ್ಲಿ ರೋಹಿಣಿ ಮಳೆ ಸುರಿಯಬೇಕಿತ್ತು. ಆದರೆ, ಜೂನ್ ತಿಂಗಳು ಮತ್ತು ಜುಲೈ ಮಧ್ಯ ಭಾಗದ ವರೆಗೂ ಅವಕೃಪೆ ತೋರಿರುವ ವರುಣದೇವ ರೈತರ ನಿರೀಕ್ಷೆ ಹುಸಿಗೊಳಿಸಿದ. ಮಳೆದೇವ ಕೃಪೆ ತೋರದ ಹಿನ್ನೆಲೆಯಲ್ಲಿ ಉ.ಕರ್ನಾಟಕದಲ್ಲಿ ಬರದ ಛಾಯೆ ಆವರಿಸಿತ್ತು. ಜೊತೆಗೆ ಬರ ಘೋಷಣೆಗೆ ಸರ್ಕಾರವೂ ಚಿಂತನೆ ನಡೆಸಿತ್ತು. ಆದರೆ, ಜು.17 ರಿಂದ ಪ್ರಾರಂಭಗೊಂಡ ಮಳೆ ಬಿಟ್ಟುಬಿಡದೆ, ನಿರಂತರ ಸುರಿದು ಆತಂಕ ಮೂಡಿಸಿದೆ.

ಪ್ರಸಕ್ತ 2.57 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಸೋಯಾವರೆ, ಹೆಸರು, ಸೂರ್ಯಕಾಂತಿ, ಗೆಜ್ಜೆಶೇಂಗಾ, ಗೋವಿನಜೋಳ, ಬಿಟಿಹತ್ತಿ, ಅಲಸಂದಿ ಬಿತ್ತನೆ ಗುರಿ ಹೊಂದಿತ್ತು. ಆದರೆ, ಮಳೆದೇವನ ಅವಕೃಪೆಗೆ ಕೇವಲ 1.47 ಪ್ರದೇಶದಲ್ಲಿ (ಶೇ.57) ಬಿತ್ತನೆ ಆಗಿದೆ.

ಈಗ ಕಳೆದ 10 ದಿನಗಳಿಂದ ನಿರಂತರ ಸುರಿವ ಮಳೆಗೆ ರೈತರ ಬಿತ್ತಿದ ಬೆಳೆಗಳು ಸಂಪೂರ್ಣ ಜಲಾವೃತಗೊಂಡಿವೆ. ಕೆಲವಡೆ ಬಾಧೆಗೆ ಒಳಗಾಗಿವೆ. ಇದರಿಂದಾಗಿ ಜಿಲ್ಲೆಯ ರೈತ ಸಮೂಹ ತಲೆಯ ಮೇಲೆ ಕೈಹೊತ್ತು ಕುಳಿತುಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಅತಿವೃಷ್ಟಿ ಹಾಗೂ ನೆರೆಹಾವಳಿಗೆ ಸೋಯಾವರೆ, ಗೆಜ್ಜೆ ಶೇಂಗಾ, ಗೋವಿನಜೋಳ, ಹೆಸರು ಬೆಳೆ, ಸೂರ್ಯಕಾಂತಿ, ಈರುಳ್ಳಿ, ಅಲಸಂದಿ, ಉದ್ದು, ಮಡಿಕೆ, ಸೇರಿದಂತೆ ಬಿತ್ತನೆಯಾದ ಮುಂಗಾರು ಹಂಗಾಮಿನ ಶೇ.90ರಷ್ಟು ವಿವಿಧ ಬೆಳೆಗಳು ವರುಣನ ಪಾಲಾಗಿವೆ.

ಸಾಲಸೂಲ ಮಾಡಿ ಬಿತ್ತಿದ ಬೆಳೆಗಳು ಮಳೆಯಿಂದ ರೈತರ ಬಾಯಿಗೆ ಬಂದ ತುತ್ತು ಕೈಗೆ ಬರದಂತಾಗಿದೆ. ಜಿಲ್ಲಾಡಳಿತ ಬೆಳೆಹಾನಿ ಸಮೀಕ್ಷೆಗೆ ಸೂಚಿಸಿ, ಸರ್ಕಾರಕ್ಕೆ ನಷ್ಟ ವರದಿ ಸಲ್ಲಿಸುವ ಮೂಲಕ ನಷ್ಟ ಅನುಭವಿಸಿದ ರೈತರಿಗ ಪರಿಹಾರ ಕೊಡಿಸುವುದೇ ಕಾದುನೋಡಬೇಕಿದೆ.



> ಮಳೆಯಿಂದ ಜಿಲ್ಲೆಯಲ್ಲಿ ಉಂಟಾದ ಬೆಳೆಹಾನಿ ಸಮೀಕ್ಷೆ ಕಾರ್ಯ ನಡೆಸಿ, ವರದಿ ಸರ್ಕಾರಕ್ಕೆ ಕಳುಹಿಸಲಿದೆ. ಪರಿಹಾರ ಬಂದಾಕ್ಷಣವೇ ಅರ್ಹ ಫಲಾನುಭವಿಗಳ ಖಾತೆಗೆ ಜಮೆ ಮಾಡಲಿದೆ.
> ■ ಕಿರಣಕುಮಾರ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ-ಧಾರವಾಡ

ಗೋಳು ಕೇಳುವರ್ಯಾರು?

ಬರ, ಅತಿವೃಷ್ಟಿ-ಅನಾವೃಷ್ಟಿ, ನೆರೆಹಾವಳಿ, ಪ್ರವಾಹ ಹೀಗೆ ಪ್ರಕೃತಿ ವಿಕೋಪಗಳ ಜತೆ ಕೃಷಿ ಮಾರುಕಟ್ಟೆಯಲ್ಲಿ ದರ ಕುಸಿತ, ಮಧ್ಯವರ್ತಿ ಹಾವಳಿ ಒಂದಿಲ್ಲೊಂದು ಸಮಸ್ಯೆ ನಡುವೆ ಕೃಷಿ ದುಸ್ತರವಾಗಿದೆ. ಈಗ ಮಳೆಯಿಂದ ಬೆಳೆಗಳು ವರುಣನ ಪಾಲಾಗಿವೆ. ರೈತನ ಕಣ್ಣೀರಿನ ಗೋಳು ಕೇಳವರ್ಯಾರು?



> ಎರಡು ವರ್ಷದಿಂದ ಬೆಳೆಗಳು ಕೈಗೆ ಹತ್ತಿಲ್ಲ. ಸಾಲ ಮಾಡಿ ದುಬಾರಿ ಬೀಜ, ಗೊಬ್ಬರ ತಂದು ಬಿತ್ತಿದ ಬೆಳೆಗಳು ಮಳೆಗೆ ಕೊಚ್ಚಿ ಹೋಗಿವೆ. ಸರ್ಕಾರ ಪರಿಹಾರ ನೀಡಿ, ಪುಣ್ಯ ಕಟ್ಟೊಬೇಕ್ರಿ.
> ■ ಮಂಜುನಾಥ ಯಮನೂರ, ರೈತ- ಧಾರವಾಡ

Hosadigantha Pg.02

VijayaKarnataka Pg.06

ಭಾರತ ಇತ್ತೀಚೆಗೆ ಅಕ್ಕಿ ರಫ್ತಿಗೆ ನಿರ್ಬಂಧ ಹೇರಿದೆ. ಜಗತ್ತಿನ ಬಹುತೇಕ ರಾಷ್ಟ್ರಗಳು ತಮ್ಮ ಪ್ರಧಾನ ಆಹಾರ ಉತ್ಪನ್ನಗಳ ರಫ್ತನ್ನು ಕಳೆದ ಎರಡು ವರ್ಷಗಳಿಂದ ನಿಲ್ಲಿಸಿವೆ. ಇದರ ಬೆನ್ನಲ್ಲೇ ರಷ್ಯಾವು ಉಕ್ರೇನ್‌ನ ವ್ಯಾಪಾರ ಮಾರ್ಗವನ್ನೇ ಬಂದ್ ಮಾಡಲು ತಂತ್ರ ರೂಪಿಸಿದೆ. ಅಷ್ಟಕ್ಕೂ ಜಗತ್ತಿನ ಆಹಾರದ ತಟ್ಟೆಯಲ್ಲಿ ಏನಾಗುತ್ತಿದೆ? ಇತರ ದೇಶಗಳಿಗೆ ಆಹಾರ ಧಾನ್ಯಗಳ ಕೊರತೆ ಏಕೆ? ಈ ಕುರಿತ ಒಂದು ನೋಟ ಇಲ್ಲಿದೆ...

ವಿಶ್ವದ ತಟ್ಟೆಯೊಳಗೆ ಯುದ್ಧ

ಆಹಾರ ಧಾನ್ಯಗಳೇಕೆ ದೇಶಗಳ ಗಡಿ ದಾಟುತ್ತಿಲ್ಲ?

ಜಗತ್ತಿನ ತಟ್ಟೆಯಲ್ಲಿ ಕಂಡೂ ಕಾಣದಂತೆ ಒಂದು ಯುದ್ಧ ಶುರುವಾಗಿದೆ. ಬಹುತೇಕ ರಾಷ್ಟ್ರಗಳು ತಾವು ಉತ್ಪಾದಿಸುವ ಪ್ರಧಾನ ಆಹಾರ ಉತ್ಪನ್ನಗಳಿಗೆ ನಿರ್ಬಂಧ ವಿಧಿಸುವುದು ಹೆಚ್ಚುತ್ತಿದೆ. ಕೊರೊನಾ ಕಾಲಘಟ್ಟದಿಂದಲೇ ಭಾರತ ಗೋಧಿಯ ರಫ್ತನ್ನು ನಿಲ್ಲಿಸಿತ್ತು. ಉತ್ಪಾದನೆ ಕಡಿಮೆಯಾಗಿದ್ದಕಾರಣ ಸಕ್ಕರೆಯನ್ನೂ ಗಡಿದಾಟಲು ಬಿಟ್ಟರಲಿಲ್ಲ. ಪ್ರಸ್ತುತ ಬಾಸ್ಮತಿ, ಕುಚ್ಚಲಕ್ಕಿಯನ್ನು ಹೊರತುಪಡಿಸಿ, ಇತರ ಅಕ್ಕಿಯ ಮಾರಾಟಕ್ಕೂ ನಿರ್ಬಂಧ ವಿಧಿಸಿದೆ.

ಕೇವಲ ಭಾರತವೊಂದೇ ಅಲ್ಲ, ಅರ್ಜೆಂಟಿನಾ ಸೋಯಾಬೀನ್ ಎಣ್ಣೆ, ಅರ್ಜೆಂಟೀನಾ ವೈನ್, ಈಜಿಪ್ಟ್ ಜೋಳ, ಇಂಡೋನೇಷ್ಯಾ ತಾಳೆ ಎಣ್ಣೆ, ಇರಾನ್ ಆಲೂಗಡ್ಡೆ, ಟರ್ಕಿ ಮಾಂಸಾಹಾರ, ಟ್ಯುನಿಷಿಯಾ ಹಣ್ಣು- ತರಕಾರಿ, ಕುವೈತ್ ಕೋಳಿ ಮಾಂಸ... ಹೀಗೆ ಒಂದಲ್ಲ ಒಂದು ರಾಷ್ಟ್ರ ತಾನು ಉತ್ಪಾದಿಸುವ ಪ್ರಧಾನ ಆಹಾರ ಉತ್ಪನ್ನವನ್ನು ಒಂದೆರಡು ವರ್ಷಗಳಿಂದ ರಫ್ತು ಮಾಡಲು ಹಿಂದೇಟು ಹಾಕುತ್ತಲೇ ಇವೆ. ಇದಕ್ಕೆ ಯುದ್ಧ ಬೆಲೆ ಏರಿಕೆ, ಹವಾಮಾನ ವೈಪರೀತ್ಯ ಮುಂತಾದ ಕಾರಣಗಳೂ ಇವೆ. ಇಷ್ಟೆಲ್ಲದರ ನಡುವೆ, ರಷ್ಯಾ ಜಗತ್ತಿಗೆ ಬಹುದೊಡ್ಡ ಆಘಾತ ಕೊಟ್ಟಿದೆ. ಉಕ್ರೇನ್‌ನಿಂದ ಕಪ್ಪು ಸಮುದ್ರದ ಮೂಲಕ ಹಡಗುಗಳಲ್ಲಿ ಆಫ್ರಿಕಾ, ಮಧ್ಯಪ್ರಾಚ್ಯ ಮತ್ತು ಏಷ್ಯಾದ ದೇಶಗಳಿಗೆ ಆಹಾರ ಧಾನ್ಯ ಸಾಗಣೆಗೆ ಅನುಮತಿಸಿದ್ದ ಯುದ್ಧಕಾಲದ ಒಪ್ಪಂದವನ್ನು ಹಠಾತ್ತನೆ ಸ್ಥಗಿತಗೊಳಿಸಿದೆ.

ಮೊದಲು ಈ ಒಪ್ಪಂದದ ಮೂಲಕ ಉಕ್ರೇನ್, ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ಆಹಾರ ಧಾನ್ಯಗಳನ್ನು ಸುಗಮವಾಗಿ ಸಾಗಿಸುತ್ತಿತ್ತು. ಈ ಒಪ್ಪಂದಕ್ಕೆ ಯಾವುದೇ ನಿರ್ಬಂಧ ಹೇರುವುದಿಲ್ಲ ಎಂದು ರಷ್ಯಾ ಯುದ್ಧದ ಆರಂಭದಲ್ಲಿಯೇ ನೀಡಿದ್ದಂಥ ವಾಗ್ದಾನವನ್ನು ಹಿಂತೆಗೆದುಕೊಂಡಿದೆ. ರಷ್ಯಾದ ಈ ನಿಲುವು ಬಹುತೇಕ ರಾಷ್ಟ್ರಗಳಲ್ಲಿ ಆಹಾರ ಧಾನ್ಯಗಳ ಕೊರತೆಗೆ ನಾಂದಿಹಾಡಲಿದೆ ಎಂಬ ಆತಂಕ ಕಾಡಿದೆ.

ಜಗತ್ತಿನ ಆಹಾರ ಸ್ಥಿತಿಗತಿ ಸಮಾಧಾನಕರವಾಗಿಲ್ಲದ ಹೊತ್ತಿನಲ್ಲಿಯೇ ಇಂಥ ನಿರ್ಬಂಧಗಳು ಬಡರಾಷ್ಟ್ರಗಳ ನಿದ್ದೆಗೆಡಿಸಿವೆ.

ವಿಕ ಪೋಕಸ್


100 ವರ್ಷಗಳಲ್ಲಿ ಶೇ.90 ಆಹಾರ ಧಾನ್ಯಗಳ ಕೊರತೆ

ಜಗತ್ತಿನಲ್ಲಿ ಕಳೆದ ಒಂದು ಶತಮಾನದಲ್ಲಿ ಶೇ.90ರಷ್ಟು ಧಾನ್ಯ ಪ್ರಭೇದಗಳು ಕಣ್ಮರೆಯಾಗಿವೆ ಎನ್ನುವುದು ಆಹಾರ ಮತ್ತು ಕೃಷಿ ಸಂಸ್ಥೆ (FAO) ಹೇಳುವಂಥ ವರದಿ. ಜಗತ್ತಿನ ಆಹಾರ ಬಹುತೇಕ ಏಕರೂಪ ತಳಿದಿರುವುದರಿಂದ ಮೂಲ ಪ್ರಭೇದಗಳಲ್ಲಿ ಕೇವಲ 9 ಜಾತಿಗಳು ಮಾತ್ರವೇ ಎಲ್ಲರ ಹೊಟ್ಟೆ ತುಂಬಿಸುತ್ತಿವೆ. 2050ರ ಹೊತ್ತಿಗೆ, ನಾವು ತಿನ್ನುತ್ತಿರುವ 3ನೇ 1 ಭಾಗದಷ್ಟು ಬೆಳೆಗಳು ಕಣ್ಮರೆಯಾಗಿರುತ್ತವೆ ಎಂದೂ ವರದಿ ಆತಂಕ ವ್ಯಕ್ತಪಡಿಸಿದೆ.

- ಪ್ರಸ್ತುತ ಜಗತ್ತಿನ ಬಹುಭಾಗಗಳು ಏಕರೂಪ ಶೈಲಿಯ ಆಹಾರವನ್ನು ಆಳವಡಿಸಿಕೊಳ್ಳುತ್ತಿವೆ. ಅಕ್ಕಿ, ಗೋಧಿ ಮತ್ತು ಜೋಳದಂಥ ಕೆಲವು ಧಾನ್ಯಗಳು ಮಾತ್ರ ಜಗತ್ತನ್ನು ಪೋಷಿಸುತ್ತಿವೆ.
- ಹೈಬ್ರಿಡ್ ಪ್ರಭೇದಗಳು ಹೆಚ್ಚುತ್ತಿದ್ದು, ಅದರಲ್ಲಿ ಪೌಷ್ಟಿಕಾಂಶವು ತೀರಾ ಕಡಿಮೆಯಾಗಿದೆ.

ಮೂಲ ತಳಿಗಳಿಗೆ ಹೈಬ್ರಿಡ್ ಹೊಡೆತ

- 20ನೇ ಶತಮಾನದಿಂದ ಜನಸಂಖ್ಯೆ ಭಾರೀ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಆಹಾರ ಧಾನ್ಯಗಳ ಬೇಡಿಕೆಯೂ ಅಧಿಕವಾಗಿದೆ. ಇದಕ್ಕೆ ತಕ್ಕಂತೆ ಹೈಬ್ರಿಡ್ ತಳಿಗಳ ಪ್ರವೇಶದಿಂದಾಗಿ ಮೂಲ ತಳಿಗಳು ಮರೆಗೆ ಸರಿಯುತ್ತಿವೆ.
- ಹೈಬ್ರಿಡ್ ತಳಿಗಳನ್ನು ಶೋಧಿಸಿದ ದೊಡ್ಡ ಕಂಪನಿಗಳು ಪೇಟೆಂಟ್ ಪಡೆದು ತಮ್ಮ ಆಹಾರ ಉತ್ಪನ್ನಗಳನ್ನು ಬೇರೆ ದೇಶಗಳಿಗೆ ಪೂರೈಸತೊಡಗಿವೆ. ಇದರಿಂದ ಆಹಾರ ಧಾನ್ಯಗಳ ಬೆಲೆ ತಗ್ಗಿದೆ.
- ಆಮದು ಮಾಡಿಕೊಳ್ಳುವ ದೇಶಗಳು ತಮ್ಮ ದೇಶೀ ಬೆಳೆಗಳನ್ನು ಬಿಟ್ಟು ಅಗ್ಗದ ವಿದೇಶಿ ಧಾನ್ಯಗಳ ಮೇಲೆ ಅವಲಂಬಿತವಾಗಿವೆ.



ಭಾರತದ ಅಕ್ಕಿ ವಿಶ್ವದ 150 ದೇಶಗಳಿಗೆ ಆಹಾರ

ಜಗತ್ತಿನ 300 ಕೋಟಿಗೂ ಹೆಚ್ಚು ಜನರಿಗೆ ಅಕ್ಕಿ ದೈನಂದಿನ ಆಹಾರ. ಅಂದರೆ, ಜಗತ್ತಿನ ಶೇ.81ರಷ್ಟು ಜನರು ಭಾರತೀಯ ಅಕ್ಕಿಯ ಮೇಲೆ ಅವಲಂಬಿತರಾಗಿದ್ದಾರೆ. ಭಾರತ ಪ್ರತಿವರ್ಷ ಸುಮಾರು 210 ಮಿಲಿಯನ್ ಮೆಟ್ರಿಕ್ ಟನ್ ಅಕ್ಕಿಯನ್ನು 150 ದೇಶಗಳಿಗೆ ರಫ್ತು ಮಾಡುತ್ತದೆ. ವಿಶ್ವದ ಅಗ್ರಗಣ್ಯ ಅಕ್ಕಿ ಪೂರೈಕೆದಾರರು ಇವರು...

ಭಾರತ	37.5%
ಥಾಯ್ಲೆಂಡ್	13%
ಪಾಕಿಸ್ತಾನ	8.4%
ವಿಯೆಟ್ನಾಂ	7.7%
ಅಮೆರಿಕ	7.5%
ಚೀನಾ	3.6%

ಹೆಚ್ಚು ಆಹಾರ ವ್ಯರ್ಥಮಾಡುವ ದೇಶಗಳು

ಚೀನಾ **9.64** ಕೋಟಿ ಟನ್, ಭಾರತ **6.76** ಕೋಟಿ ಟನ್, ಅಮೆರಿಕ **1.93** ಕೋಟಿ ಟನ್, ಜಪಾನ್ **81.59** ಲಕ್ಷ ಟನ್, ಜರ್ಮನಿ **62.63** ಲಕ್ಷ ಟನ್

ಭಾರತದಿಂದ ಕಣ್ಮರೆಯಾದ ಪ್ರಮುಖ ಧಾನ್ಯಗಳು

- **ಮಟಕಿ ಕಾಳು, ಕರ್ನಾಟಕ:** ಆಲಸಂದೆ ಕಾಳಿಗಿಂತ ತುಸು ಸಣ್ಣ ಗಾತ್ರದಲ್ಲಿ ಲಭ್ಯವಾಗುತ್ತಿದ್ದ ಈ ಕಾಳು ವೇಗವಾಗಿ ಕಣ್ಮರೆಯಾಗುತ್ತಿದೆ. ಪಾರಿವಾಳಗಳ ಕಾಟದಿಂದಾಗಿ ರೈತರು ಇದನ್ನು ಬೆಳೆಯುವುದನ್ನೇ ನಿಲ್ಲಿಸುತ್ತಿದ್ದಾರೆ.
- **ಕರ್ಹಾನಿ ಅಕ್ಕಿ, ಛತ್ತೀಸಗಢ:** ಇದೊಂದು ಕಪ್ಪು ಅಕ್ಕಿ. ಪೌಷ್ಟಿಕಯುಕ್ತ ಈ ಅಕ್ಕಿಯ ಬದಲು ಹೈಬ್ರಿಡ್ ಅಕ್ಕಿಗೆ ಸರಕಾರ ಉತ್ತೇಜನ ನೀಡುತ್ತಿದೆ.
- **ಮಾರ್ಸಾ ಅಕ್ಕಿ, ಛತ್ತೀಸಗಢ:** ಇದು ಕೂಡ ಕಪ್ಪು ಅಕ್ಕಿ. ದಾಂತೇವಾಡದಲ್ಲಿ ಬೆಳೆಯಲಾಗುತ್ತಿತ್ತು. ಈಗ ದಿಢೀ ಹೈಬ್ರಿಡ್ ಅಕ್ಕಿಯ ಮುಂದೆ ಇದರ ಜನಪ್ರಿಯತೆ ತಗ್ಗಿದೆ.
- **ಬಾರ್ಲಿ, ಕಾಳಹಂಡಿ ರಾಗಿ:** ಒಡಿಶಾದ ರಾಯಗಡ ಮತ್ತು ಕಾಳಹಂಡಿಯಲ್ಲಿ ಅನೇಕ ವಿಧದ ಬಾರ್ಲಿ ಮತ್ತು ರಾಗಿ ಬಾಲ್ಡಿಯಲ್ಲಿದ್ದವು. ಹವಾಮಾನ ವೈಪರೀತ್ಯ ಕಾರಣ ಈ ಬೆಳೆಯ ಬದಲು ಅಲ್ಲೀಗ ಹುಂಡಿ, ಅರಿಶಿನ ಮತ್ತು ಅನಾನಸ್ ಬೆಳೆಯಲಾಗುತ್ತಿದೆ.
- **ಕೆಂಪು ಅಕ್ಕಿ, ಮೇಘಾಲಯ:** ತೇವಾಂಶಯುಕ್ತವಾಗಿದ್ದ ಮೇಘಾಲಯದ ಕೆಂಪು ಅಕ್ಕಿಗೆ ಭಾರೀ ಬೇಡಿಕೆ ಇತ್ತು. ಆದರ ಜಾಗದಲ್ಲಿ ಹೈಬ್ರಿಡ್ ಅಕ್ಕಿ ಆಕ್ರಮಿಸಿಕೊಂಡಿದೆ.

ಆಂಕಿ-ಅಂಶ ಮಾಹಿತಿ: ವಿಶ್ವಸಂಸ್ಥೆ ವರ್ಲ್ಡೊಮೀಟರ್ಸ್

ಆಹಾರ ಪೂರೈಕೆ ಎಲ್ಲಿಂದ?

ಗೋಧಿ
ಅವಲಂಬನೆ: 200 ಕೋಟಿ ಜನ
ರಫ್ತುದಾರರು: ರಷ್ಯಾ 13.1%, ಅಮೆರಿಕ 13.1%, ಆಸ್ಟ್ರೇಲಿಯಾ 13%

ಸಮುದ್ರ ಆಹಾರ
ಅವಲಂಬನೆ: 300 ಕೋಟಿ ಜನ
ರಫ್ತುದಾರರು: ಚೀನಾ 15%, ಇಂಡೋನೇಷ್ಯಾ 8%, ಪೆರು 7%

ಹಣ್ಣು
ಅವಲಂಬನೆ: 170ಕ್ಕೂ ಹೆಚ್ಚು ರಾಷ್ಟ್ರಗಳು
ರಫ್ತುದಾರರು: ಥಾಯ್ಲೆಂಡ್ 27.7%, ನ್ಯೂಜಿಲೆಂಡ್ 16.8%, ಸ್ಪೇನ್ 3.92%

ತರಕಾರಿ
ಅವಲಂಬನೆ: 170ಕ್ಕೂ ರಾಷ್ಟ್ರಗಳು
ರಫ್ತುದಾರರು: ಮೆಕ್ಸಿಕೊ 50.9%, ಸೌದಿ ಅರೇಬಿಯಾ 2.81%, ಕೆನ್ಯಾ 5.91%

ಹಾಲು
ಅವಲಂಬನೆ: 181 ರಾಷ್ಟ್ರಗಳು
ರಫ್ತುದಾರರು: ಜರ್ಮನಿ 15.1%, ಫ್ರಾನ್ಸ್ 8.5%, ಬೆಲ್ಜಿಯಂ 7.5%

ಮೊಟ್ಟೆ
ಅವಲಂಬನೆ: 170ಕ್ಕೂ ರಾಷ್ಟ್ರಗಳು
ರಫ್ತುದಾರರು: ನೆದರ್ಲೆಂಡ್ಸ್ 19.3%, ಬೆಲ್ಜಿಯಂ 5.51%, ಅಮೆರಿಕ 11.5%

ಜಗತ್ತನ್ನು ಹಸಿವು ನುಂಗುತ್ತಿದೆ...

- 2021ರ ವಿಶ್ವಸಂಸ್ಥೆ ವರದಿ ಪ್ರಕಾರ, 800 ದಶಲಕ್ಷ ಅಂದರೆ ವಿಶ್ವದ ಜನಸಂಖ್ಯೆಯ ಶೇ.10ರಷ್ಟು ಜನರು ಹಸಿವಿನಿಂದ ಬಳಲುತ್ತಿದ್ದರು. ಒಪ್ಪೊತ್ತಿನ ಹೊಟ್ಟೆ ಭರ್ತಿಯಾಗುವಷ್ಟೂ ಆಹಾರ ಅವರಿಗೆ ಲಭಿಸುತ್ತಿಲ್ಲ.
- ಆಫ್ರಿಕದ ಜನಸಂಖ್ಯೆಯ ಶೇ.20.2, ಏಷ್ಯಾದ ಶೇ.9.1 ಮತ್ತು ಲ್ಯಾಟಿನ್ ಅಮೆರಿಕದ ಶೇ.8.6 ಮಂದಿ ಹಸಿವಿನಿಂದ ಬಳಲುತ್ತಿದ್ದಾರೆ.
- ವಿಶ್ವದ 63 ದೇಶಗಳ 200 ಕೋಟಿಗೂ ಹೆಚ್ಚು ಜನರಿಗೆ ಆಹಾರ ಭದ್ರತೆ ಸುರಕ್ಷಿತವಾಗಿಲ್ಲ.
- 2030 ರಲ್ಲಿ 67 ಕೋಟಿ ಅಂದರೆ ವಿಶ್ವದ ಜನಸಂಖ್ಯೆಯ ಸುಮಾರು ಶೇ.8 ಜನರಿಗೆ ಆಹಾರಕ್ಕಾಗಿ ಸಾಕಷ್ಟು ಆಹಾರವನ್ನು ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಅಂದಾಜಿಸಲಾಗಿದೆ.

ಭವಿಷ್ಯದ ಆಹಾರ ಹೇಗಿರಲಿದೆ?

- ಪ್ರಪಂಚದಲ್ಲಿ ಬೆಳೆ ಭೂಮಿ ಕಡಿಮೆಯಾಗುತ್ತಿದೆ. ಪ್ರಸ್ತುತ, ಒಬ್ಬ ವ್ಯಕ್ತಿಗೆ 1.6 ಹೆಕ್ಟೇರ್ ಭೂಮಿ ಲಭ್ಯವಿದ್ದು 2050ರ ವೇಳೆಗೆ ಇದು 0.1 ಹೆಕ್ಟೇರ್‌ಗೆ ಕುಸಿಯಲಿದೆ.
- ಒಂದು ಅಂದಾಜಿನ ಪ್ರಕಾರ, ದಿನಸಿಗಳು, ತರಕಾರಿಗಳು ಮತ್ತು ಹಣ್ಣುಗಳ ಜಾಗತಿಕ ಬಳಕೆ ಭವಿಷ್ಯದಲ್ಲಿ ಶೇ.50ರಷ್ಟು ಹೆಚ್ಚಾಗಲಿದೆ.
- ಸೊಪ್ಪು ನಮ್ಮ ಆಹಾರದ ಪ್ರಮುಖ ಭಾಗ. ಪ್ರೊಟೀನ್, ಕಬ್ಬಿಣ ಮತ್ತು ಆಂಟಿ ಆಕ್ಸಿಡೆಂಟ್‌ಗಳ ಉತ್ತಮ ಮೂಲ. ಕಡಿಮೆ ಸಮಯದಲ್ಲಿ ಉತ್ತಮ ಇಳುವರಿ ನೀಡುವಂಥ ಸೊಪ್ಪುಗಳೇ ಪ್ರಧಾನ ಆಹಾರವಾಗಬಹುದು.
- ಗೋಧಿ ಮತ್ತು ಅಕ್ಕಿಗೆ ಪರ್ಯಾಯವಾಗಿ ಆಹಾರಧಾನ್ಯಗಳು ಬಾಲ್ಡಿಗೆ ಬರಲಿವೆ.
- ಪ್ರಯೋಗಾಲಯದಲ್ಲಿ ತಯಾರಿಸಿದ ಮಾಂಸದ ಬಳಕೆ ಹೆಚ್ಚುತ್ತದೆ. ಪ್ರಸ್ತುತ ಸಿಂಗಾಪುರದಲ್ಲಿ ಈ ಟ್ರೆಂಡ್ ಶುರುವಾಗಿದೆ.

KannadaPrabha Pg.04

ಬೆಂಗಳೂರು ಕೃಷಿ ಮೇಳಕ್ಕೆ 5 ಹೊಸ ತಳಿ ಬಿಡುಗಡೆ


ರಾಗಿ, ಹಲಸು, ಸಾಮೆ, ಬರಗು, ಸೂರ್ಯಕಾಂತಿ ಹೊಸ ತಳಿ ಲೋಕಾರ್ಪಣೆಗೆ ಸಿದ್ಧತೆ | ನವೆಂಬರ್ ಮೊದಲ ವಾರ ಜಿಕೆವಿಕೆಯಲ್ಲಿ ರೈತರ ಹಬ್ಬ?

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಬಹು ನಿರೀಕ್ಷಿತ ಕೃಷಿ ಮೇಳಕ್ಕೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಸಜ್ಜಾಗುತ್ತಿದ್ದು, 10 ಜಿಲ್ಲೆಯ ಹವಾಮಾನಕ್ಕೆ ಪೂರಕವಾದ ಐದು ಹೊಸ ತಳಿಗಳನ್ನು ಬಿಡುಗಡೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ನವೆಂಬರ್ ಮೊದಲ ವಾರದಲ್ಲಿ ಹೆಬ್ಬಾಳದ ಜಿಕೆವಿಕೆಯಲ್ಲಿ ಕೃಷಿ ಮೇಳ ನಡೆಯುವ ಸಾಧ್ಯತೆಯಿದ್ದು, 5 ಹೊಸ ತಳಿಗಳು ಲೋಕಾರ್ಪಣೆಯಾಗಲಿವೆ. ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಹಿನ್ನೆಲೆಯಲ್ಲಿ 5 ತಳಿಗಳಲ್ಲಿ 3 ಸಿರಿಧಾನ್ಯಗಳೇ ಆಗಿರುವುದು ವಿಶೇಷವಾಗಿದೆ. ರಾಗಿ, ಹಲಸು, ಸಾಮೆ, ಬರಗು ಮತ್ತು ಸೂರ್ಯಕಾಂತಿಯ ಹೊಸ ತಳಿಗಳು ಈ ಬಾರಿ ಮೇಳದಲ್ಲಿ ಆಕರ್ಷಣೆಯಾಗಲಿವೆ.

ಈ ಐದು ಹೊಸ ತಳಿಗಳನ್ನೂ ವಿವಿ ವ್ಯಾಪ್ತಿಯ ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಮತ್ತು ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ರೈತರು ಬೆಳೆಯಬಹುದಾಗಿದೆ.





ರೈತರಿಗೆ ಉಪಯುಕ್ತವಾಗುವಂತೆ 5 ಹೊಸ ತಳಿಗಳನ್ನು ಕೃಷಿ ಮೇಳದಲ್ಲಿ ಲೋಕಾರ್ಪಣೆಗೊಳಿಸಲಾಗುವುದು. ರೈತರ ಸಹಭಾಗಿತ್ವದಲ್ಲಿ ಹೊಸ ತಳಿಗಳ ಬೀಜೋತ್ಪಾದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.
• ಡಾ.ಎಸ್.ವಿ.ಸುರೇಶ್
ಬೆಂಗಳೂರು ಕೃಷಿ ವಿವಿ ಕುಲಪತಿ

ಮೂರೂವರೆ ತಿಂಗಳಿಗೇ ಕಟಾವು : 'ಎಂ.ಎಲ್. 322 ರಾಗಿ'ಯ ಹೊಸ ತಳಿಯನ್ನು ವಿವಿ ಸಂಶೋಧಿಸಿದ್ದು, ಮೂರೂವರೆ ತಿಂಗಳಿಗೇ ಇದು ಕಟಾವಿಗೆ ಬರಲಿದೆ. ಆಗಸ್ಟ್‌ವರೆಗೂ ಬಿತ್ತನೆ ಮಾಡಬಹುದಾಗಿದ್ದು, ಮುಂಗಾರು ವಿಳಂಬಕ್ಕೆ ಸೂಕ್ತವಾದ ತಳಿಯಾಗಿದೆ. ಬೆಂಕಿ ರೋಗ, ಇಲಕ ರೋಗ ನಿರೋಧಕ ಶಕ್ತಿ ಹೊಂದಿದ್ದು ಹೆಕ್ಟೇರ್‌ಗೆ 40 ರಿಂದ 45 ಕ್ವಿಂಟಲ್ ಇಳುವರಿ ಬರಲಿದೆ. ಗಟ್ಟಿಮುಟ್ಟಾದ ಕಾಂಡ ಹೊಂದಿದ್ದು ತೆನೆ ಸುಲಭಕ್ಕೆ ನೆಲಕ್ಕೆ ಬೀಳುವುದಿಲ್ಲ.

ಎಲೆ ಅಂಗಮಾರಿ ಮತ್ತು ತೆನೆ ಕಾಡಿಗೆ ರೋಗಕ್ಕೆ ನಿರೋಧಕತೆ ಹೊಂದಿದ್ದು ಮೂರು ತಿಂಗಳಿಗೆ ಕಟಾವಿಗೆ ಬರುವ 'ಜಿಪಿಯುಎಲ್-11 ಸಾಮೆ', ಅಧಿಕ ಬೀಜದ ಜೊತೆಗೆ ಎಣ್ಣೆಯಲ್ಲೂ ಇಳುವರಿ ಬರುವ 'ಕೆಬಿಎಸ್‌ಎಚ್-85 ಸೂರ್ಯಕಾಂತಿ', 80 ದಿನದಲ್ಲಿ ಫಲ ಬರುವ ಹೆಕ್ಟೇರ್‌ಗೆ 18 ರಿಂದ 20 ಕ್ವಿಂಟಲ್ ಇಳುವರಿ ನೀಡುವ 'ಜಿಪಿಯುಬಿ-32 ಬರಗು' ತಳಿಯನ್ನೂ ವಿವಿಯ ವಿಜ್ಞಾನಿಗಳ ತಂಡ ಸಂಶೋಧಿಸಿದೆ ಎಂದು ವಿವಿ ಮೂಲಗಳು ತಿಳಿಸಿವೆ.

ಬರಲಿದೆ ಅಧಿಕ ರುಚಿಯ ಜಿಕೆವಿಕೆ ಕೆಂಪು ಹಲಸು

ಸಾಮಾನ್ಯವಾಗಿ ನಾಲ್ಕೈದು ವರ್ಷಕ್ಕೆ ಹಲಸು ಫಸಲು ನೀಡುತ್ತದೆ. ಆದರೆ, ಮೂರೂವರೆ ವರ್ಷಕ್ಕೇ ಫಸಲು ನೀಡುವ 'ಜಿಕೆವಿಕೆ ಕೆಂಪು ಹಲಸು' ತಳಿಯನ್ನು ವಿವಿಯಿಂದ ಸಂಶೋಧಿಸಲಾಗಿದೆ. ದಿಂಡಿನಲ್ಲಿ ಮಾತ್ರ ಅಂಟು ಇದ್ದು ಉದ್ದನೆಯ ತೊಳೆಗಳು ಹೆಚ್ಚಾಗಿದ್ದು ಸಕ್ಕರೆ ಅಂಶ ಅಧಿಕವಾಗಿದೆ. ಮಲ್ಲೇಶ್ವರಂ 18ನೇ ಕ್ರಾಸ್‌ನಲ್ಲಿದ್ದ ಉತ್ತಮ ರುಚಿಯ ಮರವನ್ನು 2007 ರಲ್ಲಿ ಗುರುತಿಸಿ ಬೀಜಗಳನ್ನು ರಕ್ಷಿಸಿ ಜಿಕೆವಿಕೆಯಲ್ಲಿ ಪ್ರಯೋಗ ಮಾಡಿ ಈ ಹೊಸ ತಳಿ ಅಭಿವೃದ್ಧಿಪಡಿಸಲಾಗಿದೆ. ಹಣ್ಣಿನ ವ್ಯಾಪಾರಕ್ಕೆ ಇದು ಸೂಕ್ತವಾಗಿದ್ದು, ತರಕಾರಿಯಾಗಿಯೂ ಬಳಸಬಹುದಾಗಿದೆ.

VijayaKarnataka
Pg.10

ಲವಲವಿಕ GARDEN ಲೋಕ

ಮಳೆ ನೀರಿನ ಸದ್ಬಳಕೆ



ರಾಜ್ಯದಾದ್ಯಂತ ಮುಂಗಾರು ಪ್ರಾರಂಭಗೊಂಡು ಎಲ್ಲಾ ಕಡೆ ಮಳೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕೈತೋಟದಲ್ಲಿ ನೀರಿನ ಸದ್ಬಳಕೆ ಮತ್ತು ನಿರ್ವಹಣೆ ಮಾಡುವುದು ಬಹಳ ಮುಖ್ಯ. ಹೆಚ್ಚುತ್ತಿರುವ ಜನಸಂಖ್ಯೆ ಅಥವಾ ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ನೀರು ಪೋಲಾಗುವುದನ್ನು ತಡೆದು ಸದ್ಬಳಕೆ ಮಾಡುವುದು ನಮ್ಮೆಲ್ಲರ ಮುಖ್ಯ ಕರ್ತವ್ಯ. ಇಂತಹ ಸಂದರ್ಭದಲ್ಲಿ ಚಿಕ್ಕ ಹೊಂಡ/ತೊಟ್ಟಿಗಳನ್ನು ನಿರ್ಮಾಣ ಮಾಡಿ, ಮಳೆಗಾಲದಲ್ಲಿ ಬಿದ್ದ ನೀರನ್ನು ಆದಷ್ಟು ಕೊಯ್ಲು ಮಾಡಿ ಸಂಗ್ರಹಣೆ ಮಾಡಬೇಕು. ಈ ರೀತಿ ಸಂಗ್ರಹಿಸಿದ ನೀರನ್ನು ಪೈಪ್ ಅಥವಾ ಹನಿ ನೀರಾವರಿ ಮೂಲಕ ಮುಂದಿನ ದಿನಗಳಲ್ಲಿ ಗಿಡಗಳ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಗಿಡಗಳಿಗೆ ನೀಡಿ ನೀರಿನ ಸದ್ಬಳಕೆ ಮಾಡಬಹುದು.

ಮನೆಯ ಮುಂದೆ/ಹಿಂದೆಯ ಕೈತೋಟದಲ್ಲಿ ಅಥವಾ ತಾರಸಿ ಕೈತೋಟದಲ್ಲಾಗಲಿ ಬಿದ್ದ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿದು ಹೋಗುವಂತೆ ಕಾಲುವೆಗಳ ವ್ಯವಸ್ಥೆ ಮಾಡಬೇಕು. ಇಲ್ಲವಾದರೆ, ನೀರು ನಿಲ್ಲುವುದರಿಂದ ರೋಗಗಳು ಉಲ್ಬಣವಾಗುವ ಸಂಭವಗಳು ಹೆಚ್ಚು ಆದ್ದರಿಂದ, ಆದಷ್ಟು ಈ ಸಮಯದಲ್ಲಿ ಕೊಟ್ಟಿಗೆಗೊಬ್ಬರ ಅಥವಾ ಕಾಂಪೋಸ್ಟ್ ಬಳಸುವಾಗ ಅದರೊಂದಿಗೆ ಜೈವಿಕ ಗೊಬ್ಬರಗಳನ್ನು ಸೇರಿಸಿ ಗಿಡಗಳಿಗೆ ನೀಡುವುದರಿಂದ ಮಣ್ಣಿನಿಂದ ಹರಡುವ ರೋಗಗಳನ್ನು ನಿಯಂತ್ರಿಸಬಹುದು.

–ಡಾ. ಎಂ. ಶಾಲಿನಿ,
ಸಹಾಯಕ ಪ್ರಾಧ್ಯಾಪಕರು
(ತೋಟಗಾರಿಕೆ) ಕೃಷಿ ವಿವಿ, ಬೆಂ.

Hosadigantha Pg.08

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನಿರ್ದೇಶಕ ಉಮರಬ್ಬ

ಸಿರಿಧಾನ್ಯದಿಂದ ಉತ್ತಮ ಆರೋಗ್ಯವೃದ್ಧಿ



ದೇವನಹಳ್ಳಿ: ಆರೋಗ್ಯಕರವಾಗಿರಲು ಮತ್ತು ಸದೃಢತೆಯನ್ನು ಹೊಂದಲು ಪ್ರತಿಯೊಬ್ಬರು ಸಿರಿಧಾನ್ಯ ಆಹಾರ ಪದಾರ್ಥಗಳ ಬಳಕೆಯನ್ನು ಮಾಡಲು ಆದ್ಯತೆ ನೀಡಬೇಕು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬೆಂಗ್ರಾ ಜಿಲ್ಲಾ ನಿರ್ದೇಶಕ ಉಮರಬ್ಬ ತಿಳಿಸಿದರು.

ದೇವನಹಳ್ಳಿ ತಾಲೂಕಿನ ಕಾರಹಳ್ಳಿ ಗ್ರಾಪಂಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿಸಿ) ಟ್ರಸ್ಟ್ ಹಾಗೂ ಆಕಾಶ್ ಆಸ್ಪತ್ರೆ ಸಹಯೋಗದಲ್ಲಿ ಸ್ವ-ಸಹಾಯ ಸದಸ್ಯರುಗಳಿಗೆ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮನುಷ್ಯನಿಗೆ ಗಾಳಿ, ನೀರು, ಬೆಳಕು ಮೂರು ಅತ್ಯಮುಲ್ಯವಾಗಿದೆ. ಇವುಗಳಲ್ಲಿ ಒಂದು ವ್ಯತ್ಯಾಸವಾದರೂ ಆರೋಗ್ಯದಲ್ಲಿ ಏರುಪೇರಾಗುತ್ತದೆ. ನಮ್ಮ ಪೂರ್ವಜರಾದ ಶ್ರೀ ಶಿವಕುಮಾರಸ್ವಾಮೀಜಿ, ಜ್ಞಾನಯೋಗಿ ಸ್ವಾಮಿಜಿಗಳು ಸೇರಿದಂತೆ ಹಲವಾರು 100ವರ್ಷಕ್ಕೂ ಮೇಲ್ಪಟ್ಟು ಬದುಕಿ ಆದರ್ಶರಾಗಿದ್ದಾರೆಂದರೆ, ಅವರ ಆಹಾರ ಪದ್ಧತಿ ಮತ್ತು ಅವರು ಸೇವಿಸುತ್ತಿದ್ದ ಸಿರಿಧಾನ್ಯಗಳೇ ಕಾರಣವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಮಕ್ಕಳಿಂದ ಹಿಡಿದು ಎಲ್ಲರೂ 40-50ವರ್ಷ ಜೀವಿತಾವಧಿಗೆ ಮರೆಯಾಗುತ್ತಿದ್ದಾರೆ. ಹಿಂದಿನ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಕಾರಹಳ್ಳಿ ಗ್ರಾ.ಪಂ. ಅಧ್ಯಕ್ಷ ರಮೇಶ್ ಮಾತನಾಡಿ, ಆಡು ಮುಟ್ಟದ ಸೊಪ್ಪಿಲ್ಲ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಾಡದ ಕಾರ್ಯಕ್ರಮಗಳಿಲ್ಲ. ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಆರೋಗ್ಯ ತಪಾಸಣೆ ಮಾಡುತ್ತಿರುವುದು ಹೆಚ್ಚು ಸಹಕಾರಿಯಾಗಿದೆ. ರಕ್ತಪರೀಕ್ಷೆ, ಬಿಪಿ, ಇಸಿಜಿ, ಪ್ರತ್ಯೇಕವಾಗಿ ಮಹಿಳೆಯರ ಹಲವಾರು ಆರೋಗ್ಯ ಗುಪ್ತ ಸಮಸ್ಯೆಗಳ ಪರಿಹಾರ ಸೇರಿದಂತೆ ಅನೇಕ ಉತ್ತಮ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ. ಇಂತಹ ಶಿಬಿರಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಇದರ ಸದ್ಬಳಕೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರಹಳ್ಳಿ ವಲಯ ವ್ಯಾಪ್ತಿಯಲ್ಲಿ 350ಕ್ಕೂ ಹೆಚ್ಚು ಸ್ವಸಹಾಯ ಮಹಿಳಾ ಸದಸ್ಯರು ಇರುತ್ತಾರೆ. ಸುಮಾರು 150ಕ್ಕೂ ಹೆಚ್ಚು ಮಹಿಳೆಯರು ಶಿಬಿರದ ಸದುಪಯೋಗ ಪಡಿಸಿಕೊಂಡಿದ್ದಾರೆ.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಎನ್.ರವಿ, ಹಾಲಿ ಸದಸ್ಯ ಕೆಂಪಣ್ಣ, ಆಕಾಶ್ ಆಸ್ಪತ್ರೆ ವೈದ್ಯರಾದ ಡಾ.ಸಿರಿ, ಕಿರಣ್, ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿ ಸಂಧ್ಯಶೆಟ್ಟಿ, ದೇವನಹಳ್ಳಿ ತಾಲೂಕಿನ ಯೋಜನಾಧಿಕಾರಿ ರವಿರಾಜ್‌ನಾಯಕ್, ಜ್ಞಾನವಿಕಾಸ ಸಮನ್ವಯ ಅಧಿಕಾರಿ ವಿಜಯಲಕ್ಷ್ಮೀ, ವಲಯ ಮೇಲ್ವಿಚಾರಕಿ ಶಾರದ, ಸೇವಾ ಪ್ರತಿನಿಧಿ ಮಾಲ, ಗ್ರಾಪಂ ಕಾರ್ಯದರ್ಶಿ ಯಶೋಧ್‌ಕುಮಾರ್, ಬಿಲ್‌ಕಲೆಕ್ಟರ್ ರವಿ, ಸ್ವಸಹಾಯ ಸಂಘದ ಮಹಿಳೆಯರು ಇದ್ದರು.

DeccanHerald Pg.01

FIBRE FIX

Silk, with a nano touch, promises new industrial applications



R KRISHNAKUMAR
BENGALURU, DHNS

Silk infused with nanomaterials is piquing research interest even as it starts to find applications across sectors. A team of Indian researchers has used carbon dots to modify silk, five millennia since its discovery, in a study that could unlock new industrial possibilities with the material.

The carbon dots-embedded silk fibre, they said, could be used in products as diverse as gas sensors and smart textiles, and aid biomedical analysis. In a paper that validates the concept, the researchers have proposed the use of modified silk fibres for the precise detection of dopamine, the neurotransmitter which shapes human emotions and perceptions.

The researchers obtained fluorescent silk fibres from silkworms by feeding them carbon dots (carbon nanomaterials) that were sprayed on the silkworm feed. These fibres, exhibiting blue fluorescence, were found to help in detecting dopamine even in low concentrations, up to 4.39 nM (nanomolars).

Varsha Lisa John and Vinod T P, at Christ (Deemed to be University), Bengaluru, worked with T R Keerthi and A R Nayana from Mahatma Gandhi University, Kottayam, and B C P Sasidharan and Athira Krishnan K A from Cochin University of Science and Technology, to develop the silk fibres. Their findings were published in the peer-reviewed journal *Macromolecular Bioscience*.

The carbon dots were synthesised from the *morus rubra* variant of mulberry leaves and sprayed on the leaves the silkworms feed on. Vinod, an associate professor in the Department of Chemistry, Christ, said the carbon dots came embedded in the silk fibre, unlike in the more prevalent practice of modifying the fibre after it is derived from the silkworms.

▸Silk, Page 5

Silk, with a nano touch, promises...

Silk, From Page 1

The fibre also displayed greater mechanical stability, he said.

The modified fibres were exposed to a fluorescence test with dopamine hydrochloride, added in varying concentrations. The test showed a quenching response, or a decrease in fluorescence intensity, when dopamine was added sequentially. "Carbon dots exhibit fluorescence with a certain intensity and wavelength. The variations in this fluorescence were recorded to validate their sensitivity to dopamine," Vinod told *DH*.

Synthesising carbon dots from mulberry leaves and using fluorescent silk fibres to design a dopamine-sensing assay is a first in India, he said. The findings also signify possibilities for the future. "These silk fibres, when modified with other functional materials, present greater applications – as materials for wound dressings, for instance," Vinod said. The paper noted that detailed studies on carbon dots' influence on larvae growth and determination of permissible dosage levels would enable the upscaling of the technique.

Economics Times Pg.10

PRIZED INGREDIENT Demand for the spice shot up since it got GI tag

Kashmir Saffron's Taking the Shine Off Silver Varq

Sutanuka.Ghosal
@timesgroup.com



Kolkata: Saffron from the Kashmir Valley is giving tough competition this year on price to silver varq (edible silver foil) used to decorate sweets. The best-quality, pure saffron is being sold at ₹4,950 per 10 gm whereas 10 gm of silver varq costs ₹800. Incidentally, 10 gm of silver costs ₹730.

Gold leaf though is still maintaining a healthy price premium at ₹59,000 per 10 gm, with prices up 40% from last year. A box containing 150 sheets of gold varq is currently priced at ₹52,500, up from ₹37,500. Silver varq is always in greater demand than gold varq because of the sharp price differential, unless you're Salt Bae and want to gussy up an otherwise ordinary steak.

One of the biggest bulk buyers of the spice, derived from the Crocus flower, is Guruvayur temple in Kerala

Saffron and silver varq are essential to give Indian sweets a premium feel.

"Both are used in sweets and give a special taste and look which are preferred by the customers," said Arik Jain, director of Ahmedabad-based Jainam Silver Products, which manufactures both silver and gold varq.

Chennai-based Bell Saffron, one of the top sellers of the product, signs agreements with growers to ensure that no fertiliser or chemicals will be used, said cofounder Nilesh Mehta. That's one of the reasons it has a superior quality award from Brussels-based International Taste Institute, he said.

"Prices of saffron have jumped by 40% compared to last year," said Mehta, whose family has been in the business for the last 60 years.

The use of edible silver garnish on sweets has a long history in Indian cuisine. It's believed to have originated in the Mughal era as a way of showcasing the wealth and opulence of the rulers. Over time, it became a common decorative element used in a variety of Indian sweets, including barfi.

Varq is traditionally made by hammering silver into thin sheets, which are then cut into small pieces and layered over the sweets. Gold is biologically inert, so the leaf passes through the digestive tract without being absorbed. It's mostly used in desserts and candy making and is available in sheets and as flakes.

The price and demand for saffron have increased since it got the Geographical Indication (GI) tag, a sign that's used on products that have a specific geographical origin and possess qualities or a reputation that are due to that origin. Saffron prices have risen to 4.95 lakh per kg from Rs 2.8 lakh per kg.

One of the biggest bulk buyers of the spice, derived from the Crocus flower, is Guruvayur temple in Kerala. It purchases 10 kg per month from Thrissur-based Abdul Azeez & Co. for covering the deity, Guruvayurappan, with a mixture of turmeric and saffron, known as the Kalabham.

"The mixing is done with a special stone called chanakallu that comes from Andhra Pradesh. Every year we float a tender for purchasing saffron and the GI tag has given a special purity to the product that we offer to God," said Radha (who uses one name), deputy administrator of Guruvayur Devaswom.

Times of India Pg.02

Incessant downpour further pushes up tomato prices

Sanika Athavale & Ranganath K | TNN

Bengaluru/Kolar: Among the streetside vegetable vendors of Bengaluru, there was a fresh buzz on Wednesday. Pushcarts that were selling tomatoes for Rs 110 or Rs 120 per kg last weekend are now selling them for Rs 140.

Vendors and agricultural marketing authorities said incessant rain is to blame for the price spike. Harvesting, they say, has become difficult amid downpour, lowering supply against an already-high demand. "Procurement prices of tomatoes increased sharply on Wednesday at Kolar APMC, thanks to short supply linked to adverse weather conditions," said CR Harish of CMR tomato mandi.

Fifteen-kg tomato boxes that were selling for Rs 2,000 each had become a wee bit cheaper last week and were available for Rs 1,400-1,900. However, good-quality tomatoes



were sold on Wednesday for Rs 2,100 for a 15-kg box, said Harish, who conducts tomato auctions at his mandi in the APMC premises in Kolar.

At Bengaluru APMC, the rate of per kg tomato was Rs 84-92 and the produce was sourced from Bengaluru Rural. "Tomatoes coming from Kolar are costlier. The district is receiving a lot of rainfall, causing the price rise. Bengaluru Urban gets its supply from Bengaluru Rural, Chikkaballapur, Kunigal, Ramanagara, Anekal and Kanakapura. All these places are getting nonstop rain, making harvesting difficult and delaying transportation," Rajanna, secretary of Binnypet APMC, said.

A source at the department of agricultural marketing said the Centre had ordered for tomatoes to be purchased at market rates in states like Karnataka, Andhra Pradesh and Maharashtra, and sent to cities in north India to manage the demand. These tomatoes are being sold at 30% discount by National Agricultural Cooperative Marketing Federation and National Cooperative Consumers Federation, which have bought them from states in the south. "But no decision has been taken so far to control price fluctuation in Karnataka," the source added.

Vijayalakshmi, secretary of Kolar APMC, said there was a slight shortfall in the arrivals on Wednesday as 57,200 boxes of 15kg each arrived at the yard as against the normal 65,000 boxes per day. Trader Srinath said continuous wet weather is likely to further affect the crop and stock may fall in the next couple of days, pushing prices to Rs 2,500 per 15kg.

The Hindu Pg.07

India's rice export ban impacts Asian and African nations most

NRIs have been resorting to panic buying rice in the U.S. despite the country's relatively low dependence on imports from India

DATA POINT

Jasmin Nihalani

In the last couple of days, many panic-stricken Non-Resident Indians (NRIs) have thronged grocery stores and supermarkets in the United States to hoard bags of rice. Videos of people jostling to buy sona masuri rice (a lightweight and aromatic medium-grain rice) and photos of long queues outside Indian stores became viral on social media. In order to control the chaos, many stores in the U.S. placed a limit on the sale of rice. Some even restricted sales to 'one rice bag per family' to deal with the unprecedented crowds.

This sudden rush followed the Indian government's decision on July 20 to ban the export of non-basmati white rice to "ensure adequate availability in the Indian market and to allay the rise in prices in the domestic market." It did not restrict the export of the other types of semi/wholly milled rice – basmati and parboiled rice.

Chart 1 shows the quantity of the three different types of semi/wholly milled rice exported by India (in tonnes) over time. The exported share of non-basmati white rice surpassed the share of basmati rice in the last two fiscal years. In FY23, India exported around 64 lakh tonnes of non-basmati white rice and close to 45 lakh tonnes of basmati rice. The most widely exported type was parboiled rice (78 lakh tonnes). Now, non-basmati white rice, which formed over a quarter of semi/wholly milled rice, has been taken off the market.

Over 140 countries bought non-basmati white rice from India in FY23. **Chart 2** shows the average quantity of non-basmati white rice bought by the top 50 importers per year between FY19 and FY23. The effect of the ban will be most pronounced in the neighbouring countries of Nepal and Bangladesh, the African countries of Madagascar, Benin, Kenya, and Ivory Coast, the Asian countries of Malaysia and Vietnam, and the UAE, which are all the biggest buyers of this type of rice in absolute terms.

Interestingly, the U.S. is ranked 34th on the list, with just over 27,000 tonnes of average imports per year. In contrast, Nepal bought 4.5 lakh tonnes per year in the considered period. Thirty three other countries are more impacted by the ban than the U.S. So, the hullabaloo over rice in the U.S. can be explained as a reporting bias.

Chart 3 shows the average quantity of semi/wholly milled rice (all the three types together) bought per year between FY19 and FY23. The U.S., which bought over 2 lakh tonnes of such rice from India per year in the period, is ranked 11th. The bigger the circle, the higher the dependency of a country on India for rice.

Here too the U.S.'s dependency on India for semi/wholly milled rice was only 20% compared to Nepal's 99%. In fact, the dependency was over 50% in 23 countries – eight of them in West Asia and nine in sub-Saharan Africa. The data hints that a part of the rush in the U.S., which sources 80% of its needs from elsewhere (mostly Thailand), could also be due to panic buying or the preference of NRIs for Indian brands.

Back in India, the decision may bring relief to consumers as many of them, especially in the southern States, were paying over ₹50 for a kilo of rice as shown in **Table 5**. Climate change-related disasters such as extreme flooding in the north and relatively poor rainfall elsewhere have also impacted rice sowing this year.

Table 4 shows the usual area covered under rice (FY18 to FY23 average) for the week ending July 13 and July 20 compared to the actual area covered this year (FY24). Chhattisgarh and Odisha are running high deficits. Overall sowing has gone down, which is why the government is restricting rice exports.

Rush for rice

The data have been sourced from the Commerce Ministry, the Agriculture Ministry, COMTRADE, and the Department for Consumer Affairs

Chart 1: The chart shows the quantity of the three different types of semi/wholly milled rice exported by India in lakh tonnes over time




Chart 2: The chart shows the average quantity of non- basmati white rice bought by the top 50 importers per year between FY19 and FY23




Chart 3: The chart shows the average quantity of semi/wholly milled rice bought per year between FY19 and FY23 (in tonnes). The bigger the circle the more the dependency




Table 4: The table shows the usual area covered by rice (lakh ha) compared to the actual area covered this year

State	For week ending July 13		For week ending July 20	
	Usual area covered	Actual area	Usual area covered	Actual area
Chhattisgarh	21.37	11.01	25.6	19.5
Odisha	10.22	2.89	13.7	5.0
Punjab	28.73	23.97	29.9	29.2
Assam	6.09	2.72	7.9	5.7
WB	4.10	2.84	8.3	5.6
Bihar	8.48	8.07	13.8	14.0
MP	8.56	8.30	12.5	20.8
Haryana	8.35	8.80	11.0	10.4
UP	31.24	31.86	41.1	39.1
All India	151.68	123.18	198.3	180.2

Table 5: The table shows the retail price of rice (₹ per kg) for select cities

	July 24, 2018	July 24, 2020	July 24, 2022	Jan. 24, 2023	June 24, 2023	July 17, 2023	July 24, 2023
Chennai	36	53	57	57	59	59	59
Hyderabad	28	44	46	41	53	53	53
Bengaluru	52	52	43	50	54	53	53
Mumbai	30	33	35	35	38	42	42
Delhi	34	35	32	37	38	39	39
Patna	31	30	36	38	38	38	38
Lucknow	28	25	31	31	35	36	36
Bhopal	30	27	30	29	33	36	36

Over 140 countries bought non-basmati white rice from India in FY23. The ban will hurt India's neighbours, African countries and Asian countries

nihalani.j@thehindu.co.in

The Hindu Pg.02

Independence Day flower show to be a tribute to Kengal Hanumanthaiya

Jahnavi T. R.
BENGALURU

One of Bengaluru's most awaited events, the Independence Day flower show at Lalbagh Botanical Garden, will be inaugurated on August 4 this year. This year, the Horticulture Department has decided to pay a tribute to Kengal Hanumanthaiya, the second Chief Minister of Karnataka.

More than 15 lakh flowers will be used for the show this year.

"Mr. Hanumanthaiya was instrumental in the construction of the Vidhana Soudha and thus there will be a floral replica of the same. Remembering his contribution to the freedom movement, there will also be a replica of the Shivapura Satyagraha Soudha. To mark his stint as the Railway Minister, there will be a 30-feet railway model," said a senior official of the department.



Visitors at the Republic Day Flower Show 2023, based on the 'History of Bengaluru city', at Lalbagh Botanical Garden. With a record footfall of 3.3 lakh visitors, a whopping ₹1.97 crore was collected in revenue. FILE PHOTO

He also said that there will be models depicting the first formation of the Kannada and Culture Department by the former CM, and the nationalisation of the Kolar gold mines, which was another one of his initiatives.

For the Republic Day show, the department had chosen 'Evolution of Bengaluru' as the theme. With a record footfall of 3.3 lakh visitors, a whopping ₹1.97 crore was collected in revenue.

The previous year's Independence Day show, organised as a tribute to the father-son actor-duo Rajkumar and Puneeth Rajkumar, had seen over 8 lakh people in attendance.

Riding high on the numbers, the officials said that they were expecting more people for the upcoming flower show. "We are expecting at least 9-10 lakh people to attend this time," said the senior official.

As many as 15 lakh flowers will be used for replicas as well as display items both inside and outside the glass house. "This will include cut flowers and the potted ones," he added.

The show will go on for 11 days as usual, until August 15. The ticket prices for adults will be ₹70 on weekdays and ₹80 on weekends while it will be ₹30 for children, on all days.

ಪ್ರತಿನಿತ್ಯದ ಆಹಾರದಲ್ಲಿ ಇರಲೇಬೇಕಾದ 10 ಬೀಜಗಳು

ಲವಲvk ಸುದ್ದಿಲೋಕ
feedbacklvk@vijaykarnataka.com

ಬೀಜಗಳು ಪ್ರಮುಖ ಪೋಷಕಾಂಶಗಳ ಮೂಲ. ಇವುಗಳನ್ನು ಆರೋಗ್ಯಕರ ಆಹಾರದ ಭಾಗವಾಗಿ ಸೇವಿಸಿದಾಗ ಬೀಜಗಳು ರಕ್ತದಲ್ಲಿನ ಸಕ್ಕರೆ, ಕೊಲೆಸ್ಟ್ರಾಲ್ ಮತ್ತು ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಹಲವು ಬೀಜಗಳು ಫೈಬರ್‌ಗಳ ಉತ್ತಮ ಮೂಲಗಳಾಗಿದ್ದು, ಅನೇಕ ಪ್ರಮುಖ ಜೀವಸತ್ವಗಳು, ಖನಿಜಗಳು ಮತ್ತು ಉತ್ಕರ್ಷಣ ನಿರೋಧಕಗಳನ್ನು ಹೊಂದಿರುತ್ತವೆ. ಅಂಥ ಪ್ರಮುಖ ಬೀಜಗಳ ಆರೋಗ್ಯಕರ ಮಾಹಿತಿ ಇಲ್ಲಿದೆ.



1 ಅಗಸೆಬೀಜ/ಫ್ಲೆಕ್ಸ್‌ಸೀಡ್: ಫೈಬರ್ ಅಂಶ ಹೆಚ್ಚಿರುವ ಅಗಸೆ ಬೀಜದಲ್ಲಿ ಒಮೆಗಾ 3 ಕೊಬ್ಬಿನಂಶ ಹಾಗೂ ಪ್ರೊಟೀನ್ ಅಂಶ ಹೆಚ್ಚಿದೆ.

2 ಎಳ್ಳು: ಉತ್ಕರ್ಷಣ ನಿರೋಧಕ ಮತ್ತು ಉರಿಯೂತದ ಗುಣಲಕ್ಷಣಗಳನ್ನು ಹೊಂದಿರುವ ಲಿಗ್ನಾನ್ಸ್ ಅಣುಗಳ ಅತ್ಯುತ್ತಮ ಆಹಾರ ಮೂಲವೆಂದರೆ ಎಳ್ಳು. ಇದು ಆಕ್ಸಿಡೇಟಿವ್ ಒತ್ತಡ ಮತ್ತು ಉರಿಯೂತವನ್ನು ಕಡಿಮೆ ಮಾಡುತ್ತದೆ.

3 ಸೂರ್ಯಕಾಂತಿ ಬೀಜ: ಪ್ರೊಟೀನ್‌ನ ಆಗರವಾಗಿರುವ ಸೂರ್ಯಕಾಂತಿ ಬೀಜದಲ್ಲಿ ವಿಟಮಿನ್ ಎ ಸಮೃದ್ಧವಾಗಿದೆ. ವಾರಕ್ಕೆ ಕೆಲವು ಬಾರಿ ಸೇವಿಸುವುದರಿಂದ ಉರಿಯೂತ ಕಡಿಮೆಯಾಗುತ್ತದೆ ಎಂದು ಸಾಬೀತಾಗಿದೆ.

4 ಚಿಯಾ ಬೀಜ: ಸಾಕಷ್ಟು ಪೋಷಕಾಂಶ ಮತ್ತು ಫೈಬರ್ ಹೊಂದಿರುವ ಚಿಯಾ ಬೀಜಗಳಲ್ಲಿ ಒಮೆಗಾ 3 ಕೊಬ್ಬಿನಂಶ ದೇಹದ ರಕ್ತದ ಮಟ್ಟವನ್ನು ಹೆಚ್ಚಿಸುತ್ತದಂತೆ.

5 ಕುಂಬಳಕಾಯಿ ಬೀಜ: ಕುಂಬಳಕಾಯಿ ಬೀಜದಲ್ಲಿ ಗಮನಾರ್ಹ ಪ್ರಮಾಣದ ಒಮೆಗಾ 6 ಕೊಬ್ಬಿನಂಶ ಇದ್ದು ಇದು ಮೂತ್ರದ ಸಮಸ್ಯೆಗಳನ್ನು ನಿವಾರಿಸುತ್ತದೆ.

6 ಕರಬೂಜ ಬೀಜ: ಪೊಟ್ಯಾಷಿಯಂ ಅಂಶ ಹೇರಳವಾಗಿರುವ ಕರಬೂಜ ಬೀಜಗಳು ರಕ್ತದೊತ್ತಡವನ್ನು ನಿಯಂತ್ರಿಸುತ್ತವೆ ಮತ್ತು ಹೃದಯದ ಆರೋಗ್ಯಕ್ಕೆ ಹೆಚ್ಚು ಸಹಕಾರಿ.

7 ದಾಳಿಂಬೆ: ರಕ್ತದೊತ್ತಡವನ್ನು ನಿಯಂತ್ರಿಸುವ ದಾಳಿಂಬೆಯಲ್ಲಿ ಕ್ಯಾಲ್ಸಿಯಂ ಅಂಶ ಇದೆ. ಕಿಡ್ನಿಯಲ್ಲಿರುವ ಕಲ್ಲುಗಳನ್ನು ನಿಯಂತ್ರಿಸಲು ಸಹ ಸಹಕಾರಿ.



8 ಪೈನ್ ಬೀಜ: ವಿಟಮಿನ್ ಎ, ಅಮೈನೊ ಆ್ಯಸಿಡ್, ವಿಟಮಿನ್ ಇ, ಕಾಪರ್, ಕಬ್ಬಿಣಾಂಶ ಸೇರಿದಂತೆ ಸಾಕಷ್ಟು ಪೋಷಕಾಂಶಗಳನ್ನು ಹೊಂದಿರುವ ಪೈನ್ ಬೀಜ ಉತ್ತಮ ಆರೋಗ್ಯಕ್ಕೆ ಹೆಚ್ಚು ಸಹಕಾರಿ.

9 ಗುಗ್ಗೆ: ವಿಟಮಿನ್ ಬಿ ಅಧಿಕವಾಗಿರುವ ಗುಗ್ಗೆ, ಆರೋಗ್ಯಕರ ಮೂಳೆ, ಜೀರ್ಣಕ್ರಿಯೆ ಮತ್ತು ಚರ್ಮದ ಆರೋಗ್ಯಕ್ಕೆ ಉತ್ತಮ.

10 ಕಲ್ಲಗಂಡಿ ಬೀಜ: ಝಿಂಕ್ ಸಮೃದ್ಧವಾಗಿರುವ ಕಲ್ಲಗಂಡಿ ಬೀಜ ಫೋಲೇಟ್, ಝಿಂಕ್, ಕಾಪರ್, ಮೆಗ್ನೇಷಿಯಮ್ ವಿಟಮಿನ್ ಬಿ ಕಾಂಪ್ಲೆಕ್ಸ್ ಪೋಷಕಾಂಶಗಳನ್ನು ಒಳಗೊಂಡಿದೆ. ■

VijayaKarnataka Pg.10

ಒಂಟಿ ಎತ್ತು ₹9.20 ಲಕ್ಷಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ಯುವ ರೈತ ನವೀನ್ ತಮ್ಮ ಒಂಟಿ ಎತ್ತನ್ನು ತಮಿಳುನಾಡಿನ ಕೊಯಮತ್ತೂರು ಸಮೀಪದ ಸರವಣಂಪಟ್ಟಿ ಗ್ರಾಮದ ಸಿರವೈ ತಂಬಿ ಅವರಿಗೆ ಬುಧವಾರ ₹ 9.20 ಲಕ್ಷಕ್ಕೆ ಮಾರಾಟ ಮಾಡಿದರು. ಊರಿನಲ್ಲಿ ಮೆರವಣಿಗೆ ಮಾಡಿ ಬೀಳ್ಕೊಟ್ಟರು.

ಎರಡು ಹಲ್ಲಿನ, ಎರಡೂವರೆ ವರ್ಷ ಪ್ರಾಯದ ಎತ್ತು ಎತ್ತಿನ ಗಾಡಿ ಓಟದ ಹತ್ತಾರು ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದಿದೆ. ಚಿರತೆ ವೇಗದಲ್ಲಿ ಓಡುತ್ತದೆಂದು ನವೀನ್ ಅವರು 'ಜಾಗ್ವಾರ್' ಎಂದು ಹೆಸರಿಟ್ಟಿದ್ದಾರೆ. ಅದೇ ಕಾರಣಕ್ಕೆ ಸುತ್ತಮುತ್ತಲಿನ ಗ್ರಾಮಗಳಲ್ಲಿ 'ಜಾಗ್ವಾರ್ ನವೀನ್' ಎಂದೇ ಹೆಸರಾಗಿದ್ದಾರೆ.

'ಒಂದೂವರೆ ವರ್ಷದ ಹಿಂದೆ ₹1.5 ಲಕ್ಷ ಕೊಟ್ಟು ಇಂಡುವಾಳು ಗ್ರಾಮದ ಅಜಿತ್ ಎಂಬವವರಿಂದ ಎತ್ತನ್ನು ಖರೀದಿಸಿದ್ದೆ. ಪೌಷ್ಟಿಕ ಆಹಾರ ಕೊಟ್ಟು ಎತ್ತಿನ ಗಾಡಿ ಓಟದ ಸ್ಪರ್ಧೆಗೆ ತರಬೇತಿ ನೀಡಿದ್ದೆ. ಹೊರ ರಾಜ್ಯದ ಸ್ಪರ್ಧೆಗಳಲ್ಲಿ ಕೂಡ



ತಮ್ಮ ಒಂಟಿ ಎತ್ತಿನೊಂದಿಗೆ ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ನವೀನ್

ಬಹುಮಾನ ಗೆದ್ದು ಕೊಟ್ಟಿತ್ತು. ಭಾರವಾದ ಮನಸ್ಸಿನಿಂದಲೇ ಮಾರಾಟ ಮಾಡುತ್ತಿದ್ದೇನೆ' ಎಂದು ನವೀನ್ ಹೇಳಿದರು.

'ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಅದರ ವೇಗ ನೋಡಿ ಮೆಚ್ಚಿಕೊಂಡು ಖರೀದಿಸಿದೆ' ಎಂದು ಸಿರವೈ ತಂಬಿ ತಿಳಿಸಿದರು.

Prajavani Pg.07